ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 5
Pages - 20
₹ - 12
May - 2015



"ಸತ್ಯವನ್ನು ಹೇಳುವವನು,
ಸ್ವಾರ್ಥವನ್ನು ಗೆದ್ದವನು ಮತ್ತು
ಶಾಂತಿ ಪಡೆದವನು
ನಿಜವಾಗಿಯೂ ಸುಖಿ"

– ಭಗವಾನ್ ಬುದ್ಧ

ಬುದ್ಧ ಪೂರ್ಣಿಮೆಯ
ಶುಭಾಶಯಗಳು

- ಮೈಸೂರಿನಲ್ಲಿ ಸಹಕಾರ ಅಕಾಡೆಮಿ ಹಾಗೂ ಸಹಕಾರ ಇಲಾಖೆ ಆಡಳಿತ ಕಚೇರಿ ಕಟ್ಟಡಗಳ ಶಿಲಾನ್ಯಾಸ
- ಬೆಂಗಳೂರಿನಲ್ಲಿ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಸಹಕಾರ ಸೌಧದ ಶಂಕು ಸ್ಥಾಪನೆ

ಸೌಹಾರ್ದ ಸಹಕಾರಿಗಳ ಸಂಖ್ಯೆ : 3157 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 781

# ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಪರಿಣಾಮಕಾರಿ ನಾಯಕತ್ವ ಅಗತ್ಯ



> ಯಾವುದೊ ಒಂದೆರಡು ನಿದರ್ಶನಗಳ ಆಧಾರದ ಮೇಲೆ ಸಹಕಾರ ಇಲಾಖೆಯವರು ಕಾಯ್ದೆ ಹಾಗೂ ನಿಯಮಗಳ ತಿದ್ದುಪಡಿಗಳನ್ನು ಮಾಡಿ ಎಲ್ಲರ ಮೇಲೆ ಹೇರುವುದು ಸಹಕಾರಿಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಅದರಿಂದ ಸಹಕಾರಿ ವ್ಯವಸ್ಥೆಯ ಮೇಲೆ ಪೆಟ್ಟು ಬೀಳುವುದು. ಸಹಕಾರಿಗಳು ಸರ್ಕಾರದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವುದು ಸಹಕಾರ ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗುವುದು ಇವುಗಳನ್ನೆಲ್ಲ ಸರಕಾರದ ಹಂತದಲ್ಲಿ ಮನವರಿಕೆ ಮಾಡುವ ಸಮರ್ಥ ನಾಯಕತ್ವ ಇಂದಿನ ಅವಶ್ಯಕತೆಯಾಗಿದೆ.

ಎಲ್ಲ ಸಹಕಾರಿ ಕಾರ್ಮಿಕ ಬಂಧುಗಳಿಗೆ ಕಾರ್ಮಿಕ ದಿನಾಚರಣೆಯ ಹಾಗೂ ಬೌದ್ಧ ಧರ್ಮದ ಅನುಯಾಯಿಗಳಿಗೆ ಬುದ್ಧ ಪೂರ್ಣಿಮೆಯ ಹಾರ್ದಿಕ ಶುಭಾಶಯಗಳು.

ಯಾವುದೇ ದೇಶದ ಯಾವುದೇ ಕ್ಷೇತ್ರದ ಯಾವುದೇ ಸಂಘ ಸಂಸ್ಥೆಗಳ ಸಂಘಟನೆಗಳ ಸಾಧನೆ, ಪ್ರಗತಿ ಅಭಿವೃದ್ಧಿಗಳಲ್ಲಿ ಮೂರು ವಿಷಯಗಳಿಗೆ ಪ್ರಾಧಾನ್ಯತೆ ನೀಡುವುದು ಅವಶ್ಯಕ. ಪ್ರಜೆಗಳ, ಸಾರ್ವಜನಿಕರ, ಸದಸ್ಯರ, ಸಕ್ರಿಯ ಪಾಲುಗಾರಿಕೆ, ದಕ್ಷ, ನಿಷ್ಠಾವಂತ, ಕ್ರಿಯಾಶೀಲ ಹಾಗೂ ಪ್ರಾಮಾಣಿಕ ಸಿಬ್ಬಂದಿ ಮತ್ತು ಉತ್ತಮ ಪಾರದರ್ಶಕ, ವೃತ್ತಿಪರ ಹಾಗೂ ದೂರದೃಷ್ಟಿಯುಳ್ಳ ಅನುಭವಿ ಆಡಳಿತ ಮಂಡಳಿ. ಈ ಎಲ್ಲವನ್ನು ಅರಿತಿರುವ ತನ್ನ ಜೊತೆಗೆ ನಡೆಸಿಕೊಂಡು ಹೋಗುವ ಅನುಭವಿ ಪರಿಣಾಮಕಾರಿ ನಾಯಕತ್ವದಿಂದ ಮಾತ್ರ ಸಾಧನೆ ಸಾಧ್ಯ ಎಂಬುದು ಎಲ್ಲ ಸಾಧನೆಗಳ ಅನುಭವದ ಮಾತು. ಸಹಕಾರಿ ಕ್ಷೇತ್ರದಲ್ಲಿ ಇದಕ್ಕೆ ಹೆಚ್ಚಿನ ಮಹತ್ವವಿದೆ.

ರಾಜ್ಯದಲ್ಲಿ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ, ಶ್ರೀ ಮೊಳಹಳ್ಳಿ ಶಿವರಾವ, ಶ್ರೀ ಕೆ.ಹೆಚ್.ಪಾಟೀಲ, ಶ್ರೀ ಕಡವೆ ಹೆಗಡೆ, ಶ್ರೀ ಅಜ್ಜಿಬಾಳ ಹೆಗಡೆ, ಶ್ರೀ ಬಂಟ್ವಾಳ ನಾರಾಯಣ ನಾಯಕ, ಶ್ರೀ ಕೆ.ವಿ.ಶಂಕರೇಗೌಡ, ಶ್ರೀ ವೀರಶೆಟ್ಟಿ ಕುಶನೂರ, ಶ್ರೀ ಧರ್ಮರಾವ ಆಫಝಲಪೂರ ಮುಂತಾದ ಅನೇಕ ಅಗಣ್ಯ ನಾಯಕರು ಹಾಗೂ ರಾಷ್ಟ್ರಮಟ್ಟದಲ್ಲಿ ಡಾ. ಡಿ.ಆರ್.ಗಾಡ್ಗಿಳ, ಶ್ರೀ ವೈಕುಂಠ ಮೆಹತಾ, ಡಾ. ಕುರಿಯನ್, ಶ್ರೀ ಎಲ್.ಸಿ.ಜೈನ್, ಶ್ರೀ ಮೋಹನ ಧಾರಿಯಾರವರಂತಹ ಅನೇಕ ಉತ್ತಮ ನಾಯಕತ್ವದಿಂದಲೆ ಇವತ್ತು ಸಹಕಾರ ಕ್ಷೇತ್ರ ಭದ್ರ ಬುನಾದಿಯೊಂದಿಗೆ ಉತ್ತಮ ಆರ್ಥಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಜೀವನದ ಪದ್ಧತಿಯಾಗಿ ಬೆಳೆದಿದೆ. ಆದ್ದರಿಂದ ಉತ್ತಮ ಪರಿಣಾಮಕಾರಿ ನಾಯಕತ್ವ ಅಗತ್ಯ.

ಈ ಕ್ಷೇತ್ರದ ಬೆಳವಣಿಗೆಗೆ ಸದಸ್ಯರಲ್ಲಿ ಆಡಳಿತ ಮಂಡಳಿಯಲ್ಲಿ ಆಸಕ್ತಿಯನ್ನು ತುಂಬುವ ಕಾರ್ಯನಿರ್ವಹಿಸುವ ನಾಯಕತ್ವ ಇಂದಿನ ಅವಶ್ಯಕತೆ. ಇದರ ಜೊತೆಗೆ ಸರಕಾರ, ಸಹಕಾರ ಇಲಾಖೆಯವರು ಏಕಪಕ್ಷೀಯವಾಗಿ ರಚಿಸುವ ಸಹಕಾರ ಕಾನೂನು ತಿದ್ದುಪಡಿಗಳ ಸಾಧಕ ಬಾಧಕಗಳ ಬಗ್ಗೆ ಸರಕಾರಕ್ಕೆ ತಿಳಿಯಪಡಿಸುವ ಮನವರಿಕೆಮಾಡುವ ಜವಾಬ್ದಾರಿಯುಳ್ಳ ನಾಯಕತ್ವದ ಅವಶ್ಯಕತೆ ಇದೆ. ಯಾವುದೊ ಒಂದೆರಡು ನಿದರ್ಶನಗಳ ಆಧಾರದ ಮೇಲೆ ಸಹಕಾರ ಇಲಾಖೆಯವರು ಕಾಯ್ದೆ ಹಾಗೂ ನಿಯಮಗಳ ತಿದ್ದುಪಡಿಗಳನ್ನು ಮಾಡಿ ಎಲ್ಲರ ಮೇಲೆ ಹೇರುವುದು ಸಹಕಾರಿಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಆದ್ದರಿಂದ ಸಹಕಾರಿ ವ್ಯವಸ್ಥೆಯ ಮೇಲೆ ಪೆಟ್ಟು ಬೀಳುವುದು. ಸಹಕಾರಿಗಳು ಸರ್ಕಾರದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವುದು ಸಹಕಾರ ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗುವುದು. ಇವುಗಳನ್ನೆಲ್ಲ ಸರಕಾರದ ಹಂತದಲ್ಲಿ ಮನವರಿಕೆ ಮಾಡುವ ಸಮರ್ಥ ನಾಯಕತ್ವ ಇಂದಿನ ಅವಶ್ಯಕತೆಯಾಗಿದೆ.

ಸಹಕಾರ ಕ್ಷೇತ್ರದ ನಾಯಕರಲ್ಲಿ ಸಹಕಾರ ತತ್ವಗಳ ಅರಿವು, ಸಹಕಾರ ಕ್ಷೇತ್ರದ ಕಾರ್ಯಾಚರಣೆಯ ಬಗ್ಗೆ ಅರಿವು, ವೃತ್ತಿಪರತೆ, ಪಾರದರ್ಶಕತೆಗಳನ್ನು ರೂಡಿಸಿಕೊಂಡು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದಲ್ಲಿ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುವುದು ಸಾಧ್ಯವಾಗುವುದರ ಜೊತೆಗೆ ಸರಕಾರ ಹಾಗೂ ಸಹಕಾರ ಇಲಾಖೆಯವರು ಸಹಕಾರಿಗಳನ್ನು ಗೌರವದಿಂದ ಕಾಣುವುದರ ಜೊತೆಗೆ ಆಡಳಿತ ಹಂತದಲ್ಲಿ ಸಹಕಾರಿಗಳಿಂದ ಸಲಹೆ ಸಹಕಾರ ಹಾಗೂ ಮಾರ್ಗದರ್ಶನಗಳನ್ನು ಅಪೇಕ್ಷಿಸುವಂತಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ವಿಶೇಷವಾಗಿ ಸೌಹಾರ್ದ ಸಹಕಾರಿಗಳು ಈ ಕ್ಷೇತ್ರದ ಬೆಳವಣಿಗೆಯ ದೃಷ್ಟಿಯಿಂದ ಪರಿಣಾಮಕಾರಿ ಸಹಕಾರಿ ನಾಯಕತ್ವ ರೂಪಿಸಿಕೊಳ್ಳಲು ಮುಂದಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಹಾಗೂ ನನ್ನ ಮನವಿಯಾಗಿದೆ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು


## ಒಳ ಪುಟಗಳಲ್ಲಿ . . .


ಜ್ಞಾನ ಜ್ಯೋತಿ ........ 4

ಮೈಸೂರಿನಲ್ಲಿ ಸಹಕಾರ ಅಕಾಡೆಮಿ ಹಾಗೂ ಸಹಕಾರ ಇಲಾಖೆ ಆಡಳಿತ ಕಚೇರಿ ಕಟ್ಟಡಗಳ ಶಿಲಾನ್ಯಾಸ ........ 5

ರೈತಾಪಿ ಜನರಿಗೆ ಸಹಕಾರ ಕ್ಷೇತ್ರದ ಮೂಲಕ ಸರಕಾರದಿಂದ ಹೆಚ್ಚಿನ ನೆರವು ಸಾಧ್ಯವಾಗಿದೆ – ಶ್ರೀ ಹೆಚ್.ಎಸ್.ಮಹದೇವಪ್ರಸಾದ್ ........ 6

ಮೇ ಮಾಹೆಯಲ್ಲಿ ನಡೆಯುವ ತರಬೇತಿಗಳು ........ 7

"ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಸಹಕಾರ ಸೌಧದ" ಶಂಕುಸ್ಥಾಪನೆ ........ 8

ಶಿವಮೊಗ್ಗ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಿಂದ ಪತ್ರಿಕಾಗೋಷ್ಠಿ .. 9

ಸಂಯುಕ್ತ ಸಹಕಾರಿಯ ನೂತನ ಸಿಬ್ಬಂದಿಯವರಿಗೆ ಪ್ರಾರಂಭಿಕ ತರಬೇತಿ ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಿ – ಗುರುನಾಥ ಜಾಂತಿಕರ್ ........ 10

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ವಾರ್ಷಿಕ ಕ್ರಿಯಾ ಯೋಜನಾ ಸಭೆ ...... 11

ಸಂಪನ್ಮೂಲ ವ್ಯಕ್ತಿಗಳ ಸಭೆ : ತರಬೇತಿ ಕಾರ್ಯಕ್ರಮಗಳ ಗುಣಮಟ್ಟ ತೃಪ್ತಿಕರ; ವ್ಯಾಪಕ ತರಬೇತಿ ಕಾರ್ಯಕ್ರಮಗಳು ಅಗತ್ಯ – ಸಿ.ಎನ್. ಪರಶಿವಮೂರ್ತಿ ........ 13

ಸಂಪನ್ಮೂಲ ವ್ಯಕ್ತಿಗಳು ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಯಶಸ್ಸಿಗೆ ಮಹತ್ವದ ಪಾತ್ರ ನಿರ್ವಹಿಸಿದ್ದಾರೆ – ಗುರುನಾಥ ಜಾಂತಿಕರ ........ 14

ಭೂಕಂಪ ಪರಿಹಾರಕ್ಕಾಗಿ ಉದಾರ ಸಹಾಯಕ್ಕೆ ಮನವಿ ........ 15

ಸಂಯುಕ್ತ ಸಹಕಾರಿಯ ಅಧ್ಯಕ್ಷರಿಂದ ವಿವಿಧ ಸಹಕಾರ ಸಂಸ್ಥೆಗಳಿಗೆ ಭೇಟಿ ... 16

ಸಹಕಾರ ಸಂಸ್ಥೆಗಳು ಧಾರ್ಮಿಕ ದತ್ತಿಗಳಲ್ಲ; ಹಣಕಾಸು ವ್ಯವಹಾರ ನಡೆಸುವ ಆರ್ಥಿಕ ಸಂಸ್ಥೆಗಳು – ಗುರುನಾಥ ಜಾಂತಿಕರ್ ........ 17

ಗ್ರಾಹಕ ಸಂಬಂಧ ನಿರ್ವಹಣೆಯ ಮಹತ್ವ ಮತ್ತು ವಿವಿಧ ಹಂತಗಳು ........ 18


# ಸಂಪಾದಕೀಯ

## ರಾಜ್ಯದ ಸಹಕಾರ ನೀತಿ

ದೇಶದ ಸಹಕಾರ ಕ್ಷೇತ್ರದ ನಕ್ಷೆಯಲ್ಲಿ ಕನಾಟಕ ರಾಜ್ಯ 3ನೇ ಸ್ಥಾನವನ್ನು ಹೊಂದಿದೆ ಎಂದು ಸಹಕಾರಿಗಳ ಅಭಿಪ್ರಾಯ. ಆದರೆ ವಾಸ್ತವವಾಗಿ ದೇಶದಲ್ಲಿ ಸಹಕಾರ ನೀತಿಯನ್ನು ಪ್ರಕಟಿಸಿದ ಮೊದಲ ರಾಜ್ಯ ಕರ್ನಾಟಕ ಎಂಬುದನ್ನು ಸಹಕಾರಿಗಳು ಗಮನಿಸಬೇಕು. ಸಹಕಾರ ಕ್ಷೇತ್ರದ ಸಾಮರ್ಥ್ಯ, ಸಾಧನೆ, ಸವಾಲುಗಳನ್ನು ಮತ್ತು ಅವಕಾಶಗಳನ್ನು ಗಮನಿಸಿದ ಕರ್ನಾಟಕ ಸರಕಾರ ಸಹಕಾರ ಕ್ಷೇತ್ರದ ಮೂಲಕ ರಾಜ್ಯದ ಆರ್ಥಿಕ ಅಭಿವೃದ್ಧಿ ಸಾಧ್ಯ, ಸಹಕಾರ ಕ್ಷೇತ್ರವನ್ನು ಬಲಪಡಿಸದೆ ಸರಕಾರದ ಯಾವ ಯೋಜನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಜಾರಿ ಮಾಡುವುದು ಕಷ್ಟ ಎಂಬುದನ್ನು ಅರಿತು ಈ ಸಹಕಾರ ಕ್ಷೇತ್ರವನ್ನು ಬಲಪಡಿಸಲು ಸಹಕಾರ ನೀತಿಯೊಂದನ್ನು ಜಾರಿಮಾಡುವುದು ಅಗತ್ಯವೆಂದು ಮನವರಿಕೆ ಮಾಡಿಕೊಂಡ ನಂತರ ಸಹಕಾರ ನೀತಿಯನ್ನು 30-6-1999 ರಂದು ಘೋಷಿಸಿದೆ. ಸಹಕಾರ ನೀತಿಯನ್ನು ಘೋಷಿಸುವುದಕ್ಕೆ ಮೊದಲು ದಿನಾಂಕ 18-04-1998 ರಂದು ಪ್ರಮುಖ ಸಹಕಾರಿಗಳ ಸಭೆಯನ್ನು ನಡೆಸಲಾಗಿದೆ. ಯೋಜನಾ ಆಯೋಗದವರ ಜೊತೆಗೆ ಸಮಾಲೋಚಿಸಿದ ನಂತರ ರಾಜ್ಯದ ಸಹಕಾರ ನೀತಿಯನ್ನು ಅಂತಿಮಗೊಳಿಸಿ ಪ್ರಕಟಿಸಲು ಕ್ರಮವಿಡಲಾಗಿದೆ.

ರಾಜ್ಯದಲ್ಲಿ ಸಹಕಾರ ನೀತಿ ಪ್ರಕಟವಾಗಿ 16 ವರ್ಷಗಳು ಕಳೆದಿವೆ. ರಾಜ್ಯದಲ್ಲಿ 1959ರ ಸಹಕಾರಿ ಸಂಘಗಳ ಕಾಯ್ದೆಗೆ ಹಾಗೂ 2001ರಲ್ಲಿ ಜಾರಿಗೆ ಬಂದಿರುವ ಸೌಹಾರ್ದ ಸಹಕಾರಿ ಕಾಯ್ದೆಗೆ ಹಲವು ತಿದ್ದುಪಡಿಗಳಾಗಿವೆ. ಈ ಅವಧಿಯಲ್ಲಿ ಹತ್ತಾರು ಸಾವಿರ ಸಹಕಾರಿ ಸಂಸ್ಥೆಗಳು ಪ್ರಾರಂಭವಾಗಿವೆ. ನೂರಾರು ಸಹಕಾರಿ ಸಂಸ್ಥೆಗಳು ಸಮಾಪನೆಯಾಗಿವೆ. ಯುವಕರು ಈ ಕ್ಷೇತ್ರದ ಕಾರ್ಯಾಚರಣೆಯಿಂದ ಆಕರ್ಷಿತರಾಗಿ ಸಹಕಾರಿ ಕ್ಷೇತ್ರಕ್ಕೆ ಕಾಲಿಡುತ್ತಿದ್ದಾರೆ. ಸಹಕಾರಿ ಕ್ಷೇತ್ರದ ಸಾಧನೆಗಳು ರಾಷ್ಟ್ರಮಟ್ಟದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿವೆ. ಸಹಕಾರ ಕ್ಷೇತ್ರ ದೇಶದ, ರಾಜ್ಯದ ಜನರ ಜೀವನ ಪದ್ಧತಿಯಾಗಿ ಕಾರ್ಯನಿರ್ವಹಿಸುತ್ತಿದೆ.

97ನೇ ಸಂವಿಧಾನ ತಿದ್ದುಪಡಿಯಾಗಿ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಸ್ವಾಯತ್ತತೆ, ವ್ಯವಹಾರಿಕ ಸ್ವಾತಂತ್ರ ಹಾಗೂ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸಲು ಸಂವಿಧಾನಾತ್ಮಕ ಸ್ಥಾನವನ್ನು ನೀಡಲಾಗಿದೆ. ಸಹಕಾರ ಕ್ಷೇತ್ರ ಬಲಪಡಿಸುವುದಕ್ಕೆ ಅಗತ್ಯವಾಗುವ ಹಲವಾರು ವಿಷಯಗಳು ಈ ತಿದ್ದುಪಡಿಯಲ್ಲಿ ಅಡಕವಾಗಿವೆ. ಈ ತಿದ್ದುಪಡಿಯ ಶೇಕಡಾ 80% ವಿಷಯಗಳು ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಕಳೆದ 15 ವರ್ಷಗಳಷ್ಟು ಹಿಂದಿನಿಂದಲೂ ಇವೆ. ಸಹಕಾರ ನೀತಿಯ ಅನುಷ್ಠಾನ ಮಾತ್ರ ಸಂಪೂರ್ಣವಾಗಿ ಜಾರಿಯಾಗದಿರುವುದನ್ನು ಸರಕಾರ ಹಾಗೂ ಸಹಕಾರಿಗಳು ಅವಶ್ಯವಾಗಿ ಗಮನಿಸುವಂತಹ ವಿಷಯ. ಸರಕಾರಗಳು, ಅಧಿಕಾರಿಗಳು ಬದಲಾಗಿರಬಹುದು ಆದರೆ ರಾಜ್ಯದಲ್ಲಿ ಸಹಕಾರ ನೀತಿಯನ್ನುವದೊಂದು ಇದೆ. ಈ ಸಹಕಾರ ನೀತಿಯ ಅನುಷ್ಠಾನದಿಂದ ಸಹಕಾರ ಕ್ಷೇತ್ರ ಪ್ರಬಲ ಆರ್ಥಿಕ ಕ್ಷೇತ್ರವಾಗಿ ರಾಜ್ಯದ ರೈತರ, ದೀನ ದಲಿತರ, ಹಿಂದುಳಿದ ವರ್ಗದವರ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ ಕಾರ್ಯನಿರ್ವಹಿಸಲು ಸಾಧ್ಯ ಎಂಬುವುದು ಮಾತ್ರ ಸತ್ಯ. ■




ಸತ್ಯ ಮತ್ತು ಧರ್ಮ ಇವು ನಮ್ಮ ಬದುಕಿನ ಅಮೂಲ್ಯ ಸಂಪದ. ಅನ್ನ ಮತ್ತು ನೀರು ಬದುಕಿಗೆ ಹೇಗೆ ಅವಶ್ಯವೊ ಹಾಗೆ ಸತ್ಯದ ಅರಿವು ಧರ್ಮಾಚಣೆಯ ಸಂತಸ ಎರಡು ಬದುಕಿಗೆ ಅತ್ಯವಶ್ಯವಾಗಿವೆ. ಜ್ಞಾನವಿಲ್ಲದಿದ್ದರೆ ಆನಂದವಿಲ್ಲ ಅರಿವು ಮತ್ತು ಧರ್ಮದ ಆಚರಣೆ ನಮ್ಮ ಜೀವನದ ಎರಡು ದಂಡೆಗಳು. ಅವೆರಡರ ಮಧ್ಯದಲ್ಲಿಯೆ ಜೀವನದ ಪಾವನ ಗಂಗೆ ನಿರಂತರ ಪ್ರಪಂಚದ ಎಲ್ಲ ಮಹಾತ್ಮರು ಸತ್ಯದ ಅರಿವನ್ನು ಧರ್ಮದ ಆಚರಣೆಯನ್ನು ಹೃದಯ ತುಂಬಿಕೊಂಡಿದ್ದಾರೆ. ಸತ್ಯದ ಅರಿವು ನಮ್ಮ ಬಹಿರಂಗದ ಸಿರಿಯಾದರೆ, ಧರ್ಮದ ಆಚರಣೆಯು ನಮ್ಮ ಬಹಿರಂಗದ ಸಂಪದ ! ಧರ್ಮದ ಕುರಿತು ಎಂಥ ಸುಂದರವಾದ ವ್ಯಾಖ್ಯಾನ ನಮ್ಮ ಋಷಿ ಮುನಿಗಳು ನೀಡಿದರು !

**ಶ್ರೋಯತಾಂ ಧರ್ಮಸರ್ವಸ್ವಂ ಶ್ರುತ್ವ ಚೈವಾವಧಾರ್ಯತಾಂ।**
**ಆತ್ಮನಃ ಪ್ರತಿಕೂಲಾನಿ ಪರೇಷ ನ ಸಮಾಚರೆತ್ ॥**

ಧರ್ಮಸರ್ವಸ್ವವನ್ನ ಹೇಳುತ್ತೇನೆ ಕೇಳಿರಿ ಕೇಳಿ ಅದರಂತೆ. ನಿಮಗೆ ಬೇಡವಾದುದನ್ನ ಮತ್ತೊಬ್ಬರಿಗೆ ಎಂದೂ ಮಾಡಬೇಡಿರಿ. ನಮಗೆ ಯಾವುದು ಬೇಡವಾಗಿದೆಯೊ, ಹಿಡಿಸುವುದಿಲ್ಲವೋ ಅದನ್ನ ನಾವು ಇನೊಬ್ಬರಿಗೆ, ಏಕೆ ಮಾಡಬೇಕು? ನಮಗೆ ಮೊಸ, ವಂಚನೆ, ಕಳವು ಸುಳ್ಳು, ನಿಂದೆ ಅಪಮಾನ ಅಗೌರವ ಹಿಡಿಸುವುದಿಲ್ಲ ಹಾಗಾದರೆ ನಾವು ಅನುಚಿತ ಕಾರ್ಯಗಳನ್ನ ಇನ್ನೊಬ್ಬರಿಗೆ ಕನಸು ಮನಸಲ್ಲಿಯೂ ಮಾಡಬಾರದು ಇದರಿಂದ ಅವರಿಗೂ ಸಂತಸ, ಇದುವೇ ಧರ್ಮ–ಸರ್ವಸ್ವ, ಸಂತಸದ ಸುಲಭ ಸೂತ್ರ !

ನಮಗೆ ಎಲ್ಲರು ಪ್ರೀತಿಸಬೇಕು ಮಾನ ಮರ್ಯಾದೆ ಕೊಡಬೇಕು ಸ್ವಾಗತಿಸಬೇಕು ಸತ್ಕರಿಸಬೇಕು, ಉಣಿಸಬೇಕು, ತಿನಿಸಬೇಕು, ಎನಿಸುವುದಿಲ್ಲವೇ? ಎಲ್ಲರಿಗು ಹಾಗೆಯೇ ಎನಿಸುತ್ತಿರಬೇಕಲ್ಲವೇ? ಆದ್ದರಿಂದ ನಾವು ಯಾವಾಗಲೂ ಇಂಥ ಸತ್ಕಾರಗಳನ್ನೇ ಮಾಡಬೇಕು. ಇದಕ್ಕಿಂತ ಶ್ರೇಷ್ಠವಾದ ಧರ್ಮ ಇನ್ನಾವುದಿದೆ ? ಒಂದು ಹೂವಿನ ಮರಕ್ಕೆ ನೀರನ್ನು ಹನಿಸಿದರೆ ಅದು ನಮಗೆ ಹೂವನ್ನು ಕೊಡುತ್ತದೆ. ಒಂದು ಹಣ್ಣಿನ ಮರಕ್ಕೆ ನೀರನ್ನು ಹನಿಸಿದರೆ ಅದು ನಮಗೆ ಹಣ್ಣನ್ನು ಕೊಡುತ್ತದೆ. ನಾವು ಮರವನ್ನು ಬೆಳೆಸಬೇಕೆ ವಿನಃ ಕಡಿಯಬಾರದು. ನಾವು ಈ ಜಗತ್ತಿಗೆ ಬಂದಿರುವುದು ಕಟ್ಟಲಿಕ್ಕೆ ವಿನಃ ಕೆಡುವಲಿಕ್ಕಲ್ಲ. ಕಟ್ಟುವುದು ಸ್ವರ್ಗದ ದಾರಿ, ಕೆಡಹುವುದು ನರಕದ ಹಾದಿ! ಓರ್ವ ವಿದೇಶದ ವಿದ್ವಾಂಸ ಹೇಳುತ್ತಾನೆ ನರಕ ಎಂದರೆ ಇನ್ನೇನು? ಯುದ್ಧವೇ ನರಕ ! ಸಾವಿರಾರು ವರ್ಷಗಳಿಂದ ಸಂರಕ್ಷಿಸಿಕೊಂಡು ಬಂದ ಸಂಸ್ಕೃತಿಯನ್ನು ಯುದ್ಧವು ಒಂದು ಕ್ಷಣದಲ್ಲಿ ನಾಶ ಮಾಡುತ್ತದೆ. ಹಚ್ಚ ಹಸಿರಿನ ಅರಣ್ಯ ಸಿರಿಯನ್ನು ಬೆಳೆಸುವುದು ಧರ್ಮವೇ ವಿನಾ ಬೆಳೆದು ನಿಂತ ಅರಣ್ಯಕ್ಕೆ ಅಗ್ನಿಯನ್ನಿಡುವುದು ಧರ್ಮವಲ್ಲ!

ನಮ್ಮ ಹತ್ತಿರ ಇರುವುದನ್ನ ಎಲ್ಲರ ಜೊತೆಗೆ ಹಂಚಿಕೊಂಡು ನಗುನಗುತ ಸದಾ ಸಂತಸದಿಂದ ಇರುವುದೇ ಧರ್ಮ ಸರ್ವಸ್ವ. ನಮ್ಮಲ್ಲಿಯ ಒಳ್ಳೆಯ ವಸ್ತುಗಳನ್ನು, ಭಾವನೆಗಳನ್ನು ಇನ್ನೊಬ್ಬರೊಂದಿಗೆ ಹಂಚಿಕೊಂಡು ಸದಾ ಸಂತಸದಿಂದ ಇರುವವರು ಮೂರು ಲೋಕದಲ್ಲಿ ಎಲ್ಲರಿಗೂ ಆದರ್ಶರಾಗುತ್ತಾರೆ.

# ಗ್ರಾಮೀಣ ಭಾಗದಲ್ಲಿ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕಲು ಸದಸ್ಯರ ಸಹಕಾರ ಅಗತ್ಯ

ಅಧುನಿಕ ಯುಗದಲ್ಲಿ ಗ್ರಾಮೀಣ ಭಾಗದಲ್ಲಿ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕಲು ಸದಸ್ಯರ ಸಹಕಾರ ಅಗತ್ಯವಾಗಿದೆ ಎಂದು ಯಮಕನಮರಡಿಯ ಹುಣಸಿಕೊಳಮಠದ ಶ್ರೀ ಗುರು ಸಿದ್ದದೇವರ ಹೇಳಿದರು.

ಇತ್ತೀಚೆಗೆ ಬೆಳಗಾವಿ ಜಿಲ್ಲೆಯ ಯಮಕನಮರಡಿಯಲ್ಲಿ ಶ್ರೀ ಏಕದಂತ ಸೌಹಾರ್ದ ಸಹಕಾರಿ ನಿ, ನೂತನ ಸೌಹಾರ್ದ ಸಹಕಾರಿ ಉದ್ಘಾಟಿಸಿ ಮಾತನಾಡುತ್ತ ಸಹಕಾರಿ ಸಂಸ್ಥೆಗಳು ಸಮಾಜದ ಒಂದು ಭಾಗವಾಗಿದ್ದು, ಇವುಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಹಕಾರಿಯ ಸೌಲಭ್ಯ ಒದಗಿಸಿ, ಆತನನ್ನು ಆರ್ಥಿಕವಾಗಿ ಸದೃಢವಾಗಿಸಿದಾಗ ಮಾತ್ರ ಸಹಕಾರಿಯ ತತ್ವ ಅನುಷ್ಠಾನ ಗೊಂಡಂತಾಗುತ್ತದೆ. ಆಗ ಮಾತ್ರ ಗಾಂಧೀಜಿ ಕಂಡ ರಾಮ ರಾಜ್ಯವಾಗಲು ಸಾಧ್ಯವೆಂದು ಹೇಳಿದರು. ಅದೇ ರೀತಿ ಸದಸ್ಯರು



ಸಹ ಪಡೆದುಕೊಂಡಿರುವ ಸಾಲಗಳನ್ನು ಸಕಾಲದಲ್ಲಿ ಮರುಪಾವತಿ ಮಾಡಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಸುಹಾಸ ಜೋಶಿ, ಶ್ರೀ ಶಿವಕುಮಾರ ಪೋತದಾರ, ಶ್ರೀ ಪ್ರಕಾಶ ನಗಾರಿ, ಕಿರಣ ರಜಪೂತ ಸೇರಿದಂತೆ ನೂರಾರು ಸಹಕಾರಿಗಳು ಉಪಸ್ಥಿತರಿದ್ದರು. ಮೊದಲಿಗೆ ಎಲ್ಲರನ್ನು ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ದೇವಪ್ಪಾ ಜಿನರಾಳ ಸ್ವಾಗತಿಸಿದರು.

## ಮೈಸೂರಿನಲ್ಲಿ ಸಹಕಾರ ಅಕಾಡೆಮಿ ಹಾಗೂ ಸಹಕಾರ ಇಲಾಖೆ ಆಡಳಿತ ಕಚೇರಿ ಕಟ್ಟಡಗಳ ಶಿಲಾನ್ಯಾಸ

# ಸಹಕಾರ ಒಂದು ಸೇವಾ ಕ್ಷೇತ್ರ; ಸಹಕಾರಿಗಳಲ್ಲಿ ಬದ್ಧತೆ ಅವಶ್ಯಕ; ತರಬೇತಿ ಇದಕ್ಕೆ ಪೂರಕ - ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ



ಸಹಕಾರ ಇಲಾಖೆಯ ವತಿಯಿಂದ ಮೈಸೂರಿನ ಗೋಕುಲಂ ಬಡಾವಣೆಯ ಎದುರು ಕೆ.ಆರ್‌ಎಸ್. ರಸ್ತೆಯಲ್ಲಿ ಸಹಕಾರ ಅಕಾಡೆಮಿ ಹಾಗೂ ಸಹಕಾರ ಇಲಾಖೆ ಆಡಳಿತ ಕಚೇರಿ ಕಟ್ಟಡಗಳ ಶಿಲಾನ್ಯಾಸ ಕಾರ್ಯಕ್ರಮ ಉದ್ಘಾಟನೆಯನ್ನು ನೆರವೇರಿಸಿದ ಮುಖ್ಯ ಮಂತ್ರಿ ಶ್ರೀ ಸಿದ್ಧರಾಮಯ್ಯನವರು ಸಹಕಾರ ಕ್ಷೇತ್ರಕ್ಕೆ 100 ವರ್ಷಗಳ ಇತಿಹಾಸವಿದೆ. ಸಹಕಾರ ತತ್ವ ನಾಡಿನ ಪ್ರಗತಿಗೆ ಸಮಾಜದ ಏಳ್ಗೆಗೆ ಉತ್ತಮ ಸಾಧನವಾಗಿ ಕಾರ್ಯನಿರ್ವಹಿಸುತ್ತಿದೆ. ಇದೊಂದು ಸೇವಾಕ್ಷೇತ್ರ. ಇಲ್ಲಿ ಕಾರ್ಯನಿರ್ವಹಿಸುವ ಸಹಕಾರಿಗಳಲ್ಲಿ ಬದ್ಧತೆ ಅವಶ್ಯಕ ಎಂದು ತಿಳಿಸಿದರು.

ಮುಂದುವರೆದು ಮಾತನಾಡುತ್ತ ಮಾನ್ಯ ಮುಖ್ಯಮಂತ್ರಿಗಳು ಆಡುಮುಟ್ಟದ ಸೊಪ್ಪಿಲ್ಲ ಎಂಬುವಂತೆ ಸಮಾಜದ ಎಲ್ಲ ವರ್ಗದಲ್ಲೂ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುವಂತಾಗಿದೆ ಆದರೆ ಸಮಾಜದ ದುರ್ಬಲ ವರ್ಗದವರಿಗೆ ಸಹಕಾರಿ ಕ್ಷೇತ್ರದ ಲಾಭ ಸಿಗುವಂತಾಗಬೇಕು. ಅವಕಾಶ ವಂಚಿತರಿಗೆ ಅವಕಾಶ ಕಲ್ಪಿಸುವುದು ಸಹಕಾರ ಧ್ಯೇಯವಾಗಬೇಕು ಎಂದು ತಿಳಿಸಿ ಸರಕಾರ ಸಹಕಾರ ಕ್ಷೇತ್ರದ ಮೂಲಕ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಮೈಸೂರು ನಗರದ ಸೌಂದರ್ಯವನ್ನು ಕಾಪಾಡುವ ಜೊತೆಗೆ ಅದನ್ನು ಅಭಿವೃದ್ಧಿಪಡಿಸುವ ಬಗ್ಗೆ ಸರಕಾರ ಚಿಂತನೆ ಇದೆ. ಪ್ರವಾಸೋದ್ಯಮವನ್ನು ಬೆಳೆಸಬೇಕು. ಇನ್ನು ಅನೇಕ ಅಭಿವೃದ್ಧಿಯ ಕಾರ್ಯಕ್ರಮಗಳ ಚಿಂತನೆ ಇದೆ. ಇವೆಲ್ಲವನ್ನು ಯೋಜನಾ ಬದ್ಧವಾಗಿ ಬೆಳೆಸೋಣ ಎಂದು ತಿಳಿಸಿದರು.



## ರೈತಾಪಿ ಜನರಿಗೆ ಸಹಕಾರ ಕ್ಷೇತ್ರದ ಮೂಲಕ ಸರಕಾರದಿಂದ ಹೆಚ್ಚಿನ ನೆರವು ಸಾಧ್ಯವಾಗಿದೆ - ಶ್ರೀ ಹೆಚ್.ಎಸ್.ಮಹದೇವಪ್ರಸಾದ್



ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವಪ್ರಸಾದ್ ಅವರು ಇಂದು ಬಸವಜಯಂತಿ ಇಂದು ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು 2 ವರ್ಷಗಳು ಪೂರ್ಣಗೊಳ್ಳುತ್ತದೆ. ಈ ಶುಭ ಸಂದರ್ಭದಲ್ಲಿ ಸಹಕಾರ ಇಲಾಖೆಯ ವತಿಯಿಂದ ಮೈಸೂರಿನ ಮೈಸೂರು ಕಾಫಿ ಪ್ರೊಸೆಸಿಂಗ್ ಸಹಕಾರ ಸಂಘದ 8 ಎಕರೆ ಜಾಗದಲ್ಲಿ $3^1/_2$ ಎಕರೆ ಜಾಗವನ್ನು ಸಹಕಾರ ಇಲಾಖೆ ಪಡೆದುಕೊಂಡು ಅದರಲ್ಲಿ $1^1/_2$ ಎಕರೆ ಜಾಗದಲ್ಲಿ ಸಹಕಾರ ಇಲಾಖೆ ಆಡಳಿತ ಕಚೇರಿಗಳು 2 ಎಕರೆ ಜಾಗದಲ್ಲಿ ಸಹಕಾರ ಅಕಾಡೆಮಿ ಪ್ರಾರಂಭಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಸಹಕಾರ ಅಕಾಡೆಮಿ ಮೂಲಕ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿ ಕಾರ್ಯಕರ್ತರಿಗೆ ಸಿಬ್ಬಂದಿಯವರಿಗೆ ಇಲಾಖೆಯ ಅಧಿಕಾರಿಗಳಿಗೆ ಶಿಕ್ಷಣ ತರಬೇತಿ ಹಾಗೂ ಪ್ರಚಾರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳುವುದರ ಜೊತೆಗೆ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಮೌಲ್ಯಮಾಪನ ಹಾಗೂ ಸಂಶೋಧನಾ ಕಾರ್ಯಗಳನ್ನು ಮಾಡಲಾಗುತ್ತದೆ. ಇದರೊಂದಿಗೆ ಸಹಕಾರ ಕ್ಷೇತ್ರದಲ್ಲಿ ವೃತ್ತಿ ಶಿಕ್ಷಣ, ಪದವಿ ಹಾಗೂ ಸ್ನಾತಕೋತ್ತರ ಶಿಕ್ಷಣವನ್ನು ನೀಡುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

## ಸಹಕಾರ ಕ್ಷೇತ್ರಕ್ಕೆ ವಿಶಾಲವಾದ ತಳಹದಿಯಿದೆ; ಸರ್ವರಿಗೂ ಪಾಲ್ಗೊಳ್ಳುವ ಅವಕಾಶ ಅಗತ್ಯ - ಶ್ರೀ ವಿ.ಶ್ರೀನಿವಾಸ ಪ್ರಸಾದ್



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಶ್ರೀನಿವಾಸ ಪ್ರಸಾದ್‌ರವರು ಸಹಕಾರ ಕ್ಷೇತ್ರಕ್ಕೆ ವಿಶಾಲವಾದ ತಳಹದಿಯಿದೆ. ಆದರೆ ನಿರೀಕ್ಷಿಸಿದ ಮಟ್ಟದ ಪ್ರಗತಿಯಾಗುತ್ತಿಲ್ಲ. ಸಮಾಜದ ಎಲ್ಲ ವರ್ಗದ ಜನರಿಗೆ ಪಾಲ್ಗೊಳ್ಳುವ ಅವಕಾಶ ದೊರೆಯುವಂತಾಗಬೇಕು. ಆಗ ಮಾತ್ರ ಪರಿಸ್ಥಿತಿ ಬದಲಾವಣೆಯಾಗುತ್ತದೆ. ಸಹಕಾರ ಕ್ಷೇತ್ರ ಸಮಾಜದ ಪ್ರಾಬಲ್ಯ ಹೊಂದಿರುವ ಸಹಕಾರಿ ಧುರೀಣರಿಂದ ಮುಕ್ತಿ ಪಡೆಯಬೇಕಾಗಿದೆ. ಇದಕ್ಕಾಗಿ ಕ್ರಮವಿಡಲು ಸರಕಾರ ಚಿಂತನೆ ನಡೆಸಿದೆ ಎಂದರು.

## ಸಹಕಾರ ಕ್ಷೇತ್ರದ ಐತಿಹಾಸಿಕ ಸಮಾರಂಭ - ಶ್ರೀ ಮಹೇಂದ್ರ ಜೈನ್



ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರನ್ನು ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವಪ್ರಸಾದರವರನ್ನು ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಶ್ರೀನಿವಾಸ ಪ್ರಸಾದ್‌ರವರನ್ನು ಅಧ್ಯಕ್ಷತೆ ವಹಿಸಿದ್ದ ಶಾಸಕ ಶ್ರೀ ವಾಸುರವರನ್ನು ಮತ್ತು ಸಮಾರಂಭದಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರನ್ನು ಮತ್ತು ಬೃಹತ್ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಸಹಕಾರಿಗಳನ್ನು ಸ್ವಾಗತ ಕೋರಿದ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಮಹೇಂದ್ರ ಜೈನ್‌ರವರು ಇದೊಂದು ಐತಿಹಾಸಿಕ ಸಮಾರಂಭ ಸಹಕಾರಿಗಳ, ಸಹಕಾರ ಇಲಾಖೆಯ ಹಾಗೂ ಸಚಿವರ ಬಹುದಿನಗಳ ಚಿಂತನೆ ಇಂದು ಸಾಕಾರಗೊಳ್ಳುತ್ತಿದೆ ಎಂದರು.

ಸಹಕಾರ ಅಕಾಡೆಮಿಯನ್ನು ಪ್ರಾರಂಭಿಸುವುದಕ್ಕಾಗಿ ಸರಕಾರ 5 ಕೋಟಿ ರೂ.ಗಳ ಅನುದಾನ ನೀಡಿದೆ. ಉಳಿಕೆ ಮೊತ್ತವನ್ನು ಸಹಕಾರ ಅಭಿವೃದ್ಧಿ ನಿಧಿಯಿಂದ ಬಳಸಿಕೊಂಡು ಕಾರ್ಯವನ್ನು ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು. ರಾಜ್ಯದಲ್ಲಿ 35403 ಸಹಕಾರ ಸಂಸ್ಥೆಗಳಿವೆ ಹಾಗೂ 2 ಕೋಟಿ ಸದಸ್ಯರ ಬಳಗವಿದೆ. ವಿಶೇಷವಾಗಿ ಕೃಷಿ, ಹೈನುಗಾರಿಕೆ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ನಮ್ಮ ರಾಜ್ಯದ ಸಹಕಾರ ಕ್ಷೇತ್ರದ ಪ್ರಗತಿಯನ್ನು ಸಾಕ್ಷೀಕರಿಸುತ್ತಿವೆ. ಸಹಕಾರಿ ಕ್ಷೇತ್ರದ ಬಲಸಂವರ್ಧನೆಗಾಗಿ ಸಹಕಾರ ಶಿಕ್ಷಣ ತರಬೇತಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಆದ್ದರಿಂದ ರಾಜ್ಯದಲ್ಲಿ ಸಹಕಾರ ಅಕಾಡೆಮಿಯನ್ನು ಸ್ಥಾಪಿಸಲಾಗುತ್ತಿದೆ. ಈ ಅಕಾಡೆಮಿಯ ಅಧ್ಯಕ್ಷರಾಗಿ ಮಾನ್ಯ ಸಹಕಾರ ಸಚಿವರು ಕಾರ್ಯನಿರ್ವಹಿಸುತ್ತಾರೆ. ಸಹಕಾರ ಇಲಾಖೆಯ ಅಧಿಕಾರಿಗಳು, ಶಿಕ್ಷಣ ತಜ್ಞರು ಹಾಗೂ ಅನುಭವಿ ಸಹಕಾರಿ ನಾಯಕರು ಈ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾರೆ ಎಂದು ತಿಳಿಸಿದರು.

## ಸಹಕಾರಿಗಳನ್ನು ಗೌರವದಿಂದ ಕಾಣಿರಿ- ಶ್ರೀ ವಾಸು



ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಚಾಮುಂಡಿ ಕ್ಷೇತ್ರದ ಶಾಸಕ ಶ್ರೀ ವಾಸುರವರು, ಮೈಸೂರಿನಲ್ಲಿ ಈ ಸಹಕಾರ ಅಕಾಡೆಮಿಯನ್ನು ಸ್ಥಾಪಿಸಲು ಕ್ರಮವಿಟ್ಟಿರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಸಹಕಾರ ಸಚಿವರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಸಹಕಾರ ಕ್ಷೇತ್ರ ಅತ್ಯಂತ ಪವಿತ್ರವಾದ ಕ್ಷೇತ್ರ. ಸಹಕಾರ ಕ್ಷೇತ್ರದ ಸಾಧನೆ ಹಾಗೂ ದೇಶದ ಹಾಗೂ ರಾಜ್ಯದ ಅಭಿವೃದ್ಧಿಗೆ ಮಹತ್ವದ ಕಾಣಿಕೆ ನೀಡಿದೆ ಎಂದು ತಿಳಿಸಿ, ಅನೇಕ ಸಹಕಾರಿ ಗಣ್ಯರನ್ನು ಹಾಗೂ ಪ್ರಾಮಾಣಿಕ ಸಹಕಾರಿ ಅಧಿಕಾರಿಗಳನ್ನು ಸ್ಮರಿಸಿದರು.

ಎಲ್ಲೊ ಒಂದೆರಡು ಕಡೆ ಸಹಕಾರ ಸಂಸ್ಥೆಗಳು ದಾರಿ ತಪ್ಪಿ ಕಾರ್ಯನಿರ್ವಹಿಸಿದಾಗ ತಪ್ಪುಗಳನ್ನು ತಿದ್ದುವ ಕಾರ್ಯ ನಡೆಯಬೇಕು. ಸಹಕಾರಿಗಳನ್ನು ಗೌರವದಿಂದ ಕಾಣಬೇಕು ಅಧಿಕಾರಿಗಳಲ್ಲಿ ದಕ್ಷತೆ ಹಾಗೂ ಪ್ರಾಮಾಣಿಕತೆಯನ್ನು ಹೆಚ್ಚಿಸುವ ಕಾರ್ಯ ಇಂತಹ ಸಹಕಾರ ಅಕಾಡೆಮಿಯಿಂದ ಆಗಲಿ ಎಂದು ಶುಭಹಾರೈಸಿದರು. ರಂಗಾಯಣ ತಂಡದ ಶ್ರೀ ಹೆಚ್. ಜನಾರ್ಧನರವರಿಂದ ಪ್ರಾರ್ಥನೆ ನಡೆಯಿತು.

ಸಮಾರಂಭದಲ್ಲಿ ಮೈಸೂರು, ಮಂಡ್ಯ, ಚಾಮರಾಜ ನಗರ, ಕೊಡಗು ಜಿಲ್ಲೆಗಳ ಪ್ರಮುಖ ಸಹಕಾರಿ ಸಂಸ್ಥೆಗಳ ಪ್ರಮುಖ ಸಹಕಾರಿಗಳು ರಾಜ್ಯಮಟ್ಟದ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳು, ಸಹಕಾರಿ ಇಲಾಖೆ ಅಧಿಕಾರಿಗಳು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ. ಜಿ. ಪಾಟೀಲ ಮತ್ತು ಅಧಿಕಾರಿಗಳು ಹಾಗೂ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು ಸಿಬ್ಬಂದಿಯವರು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ 13ನೇ ತಂಡದ ವಿಶೇಷ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ

ಕಳೆದ 6 ವರ್ಷಗಳಿಂದ ಪ್ರತಿ 6 ತಿಂಗಳಿಗೊಮ್ಮೆ ಏರ್ಪಡಿಸುತ್ತಿರುವ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ 13ನೇ ತಂಡವನ್ನು ಈ ಬಾರಿ ದಿನಾಂಕ : 11-06-2015 ರಿಂದ 20-06-2015ರವರೆಗೆ ಚಂದ್ರ ವನ ಆಶ್ರಮ, ಶ್ರೀರಂಗ ಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸಿಬ್ಬಂದಿಯವರನ್ನು ಕಳುಹಿಸಿಕೊಡಲು ಕೋರಿದೆ. 50 ಜನರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ತರಬೇತಿ ಅವಧಿಯಲ್ಲಿ ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳ ವಿವಿಧ ಸಹಕಾರಿ ಸಂಸ್ಥೆಗಳಿಗೆ ಭೇಟಿ ನೀಡಲಾಗುವುದು.

### ಮೇ ಮಾಹೆಯಲ್ಲಿ ನಡೆಯುವ ತರಬೇತಿಗಳು

| ದಿನಾಂಕ | ತರಬೇತಿಯ ಹೆಸರು | ಸ್ಥಳ |
|---|---|---|
| 8 ಮೇ 2015 | ಸಂಯುಕ್ತ ಸಹಕಾರಿಯ ನಿರ್ದೇಶಕರ, ಮುಖ್ಯಕಾರ್ಯ ನಿರ್ವಾಹಕರಿಗಾಗಿ ವೃತ್ತಿ ಪರಿಣಿತಿ ತರಬೇತಿ | ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು. |
| 14 ಮೇ 2015 | ಯುವ ಜನತೆಗಾಗಿ ವಿಶ್ವವಿದ್ಯಾಲಯದಲ್ಲಿ ಸಹಕಾರ ಸಂವಾದ | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿ. |
| 15, 16 ಮೇ 2015 | ಅರ್ಬನ್ ಬ್ಯಾಂಕ್ ಸೌಹಾರ್ದ ಸಹಕಾರಿಗಳ ಮುಕಾನಿಗಳಿಗೆ ಹಾಗೂ ಹಿರಿಯ ಅಧಿಕಾರಿಗಳಿಗೆ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ | ಬೀದರ್ |
| 21, 22 ಮೇ 2015 | ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ ಸಹಕಾರ ಆಡಳಿತ ಪರಿಣಿತಿ ತರಬೇತಿ | ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು. |
| 27, 28 ಮೇ 2015 | ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರಿಗಾಗಿ ಆಡಳಿತ ಪರಿಣಿತಿ ತರಬೇತಿ | ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು. |

# "ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಸಹಕಾರ ಸೌಧದ" ಶಂಕುಸ್ಥಾಪನೆ



ಬೆಂಗಳೂರಿನಲ್ಲಿ ದಿನಾಂಕ : 27-4-2015 ರಂದು ಸಹಕಾರ ಇಲಾಖೆಯ ನೇತೃತ್ವದಲ್ಲಿ ಮಲ್ಲೇಶ್ವರದ ಸಹಕಾರಿ ಸಂಘದ ಸ್ಥಳದಲ್ಲಿ "ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್‌ಸಹಕಾರಿ ಸೌಧದ ಶಂಕುಸ್ಥಾಪನೆಯನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ಸಹಕಾರ ಸಚಿವ ಶ್ರೀ ಹೆಚ್.ಎಸ್.ಮಹದೇವಪ್ರಸಾದ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಾರಿಗೆ ಹಾಗೂ ಬೆಂಗಳೂರು ನಗರ ಉಸ್ತುವಾರಿ ಸಚಿವ ಶ್ರೀ ರಾಮಲಿಂಗಾರೆಡ್ಡಿ, ಆಹಾರ ಸಚಿವ ಶ್ರೀ ದಿನೇಶ ಗುಂಡೂರಾವ್‌ರವರು ಆಗಮಿಸಿದ್ದರು.

ಕಾರ್ಯಕ್ರಮದಲ್ಲಿ ವಿಧಾನ ಸಭಾ ಕ್ಷೇತ್ರದ ಶಾಸಕ ಡಾ॥ ಸಿ.ಎನ್.ಅಶ್ವಥ್ಥನಾರಾಯಣರವರು, ಶಾಸಕರುಗಳಾದ ಶ್ರೀ ಎಸ್.ಟಿ.ಸೋಮಶೇಖರ, ಶ್ರೀ ಮುನಿರತ್ನ, ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಹೆಚ್.ಎಮ್.ರೇವಣ್ಣ, ಶ್ರೀ ಟಿ.ಎ.ಶರವಣ ಮುಂತಾದವರು ಭಾಗವಹಿಸಿದ್ದರು. ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಮಹೇಂದ್ರ ಜೈನ್‌ರವರು ಎಲ್ಲರನ್ನೂ ಸ್ವಾಗತಿಸಿದರು.

ಸಹಕಾರ ಇಲಾಖೆಯ ನಿಬಂಧಕ ಡಾ. ಎನ್.ಎಸ್.ಚನ್ನಪ್ಪಗೌಡ ಹಾಗೂ ಹಿರಿಯ ಅಧಿಕಾರಿಗಳು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ಮತ್ತು ಅನೇಕ ಸಹಕಾರಿ ಗಣ್ಯರು ಉಪಸ್ಥಿತರಿದ್ದರು.

# ಅಸಹಾಯಕರಿಗೆ ಸಹಕಾರಿಗಳು ಸಹಕಾರಿಯಾಗಲಿ

ಅಸಹಾಯಕರಿಗೆ ಸಹಕಾರಿ ಸಂಸ್ಥೆಗಳು ಸಹಾಯಹಸ್ತ ನಿಡುವುದರ ಮುಖಾಂತರ ಸಮಾಜದ ಸ್ವಾಸ್ಥ ಕಾಪಾಡಿಕೊಳ್ಳಲು ಸಹಕಾರಿಯಾಗಲಿ ದಿನಾಂಕ : 14-4-2015ರಂದು ಬೆಳಗಾವಿ ನಗರದ ದಶಭುಜ ವಿನಾಯಕ ಮಂದಿರದಲ್ಲಿ ಶ್ರೀ ತಿರುಪತಿ ವಿವಿದೊದ್ದೇಶಗಳ ಸೌಹಾರ್ದ ಸಹಕಾರಿ ನಿ, ಬೆಳಗಾವಿ ತನ್ನ 4ನೇ ವಾರ್ಷಿಕೋತ್ಸವವನ್ನು ಬೆಳಗಾವಿ ಜಿಲ್ಲೆಯ ನಂದನ ಮಕ್ಕಳ ಧಾಮದ ಏಡ್ಸ್ ಪೀಡಿತ ಮಕ್ಕಳ ವರ್ಷಕ್ಕೆ ಬೇಕಾಗುವ ಅಗತ್ಯ ವಸ್ತುಗಳನ್ನು ವಿತರಿಸುವ ವಿಶಿಷ್ಟ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ತಾನು ಮಾಡದ ತಪ್ಪಿಗೆ ಸಮಾಜದ ವ್ಯವಸ್ಥೆಯ ಕಾರಣದಿಂದಾಗಿ ಸಾಕಷ್ಟು ಜನರು ಅಸಹಾಯಕರಾಗಿ ಬದುಕುತಿದ್ದರೆ ಇಂತಹ ಅಸಹಾಯಕರ ಸಬಲತೆಗೆ ಸಮಾಜ ಮುಂದಾಗಬೇಕಾಗಿದೆ ಇಂತಹ ಕಡೆಗೆ ಹೆಜ್ಜೆ ಇಟ್ಟರುವ ತಿರುಪತಿ ಸೌಹಾರ್ದ ಸಹಕಾರಿ ಆಯ್ಕೆ ಮಾಡಿಕೊಂಡಿರುವ ಕೆಲಸ ಅತ್ಯಂತ ಮಹತ್ವದಾಯಕವಾಗಿದೆ ಎಂದರು ಎಂದು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸರಿತಾ ಪಾಟೀಲ ಅಭಿಪ್ರಾಯ ಪಟ್ಟರು.

ಮುಖ್ಯ ಅಥಿತಿಗಳಾಗಿ ಆಗಮಿಸಿದ ಡಾ॥ ಅಲಕಾ ಕಾಲೆ ಮಾತನಾಡುತ್ತ ಸಮಾಜದ ದೃಷ್ಟಿಯಲ್ಲಿ ಅತ್ಯಂತ ಕೀಳುಮಟ್ಟದಿಂದ ಕಾಣುತ್ತಿರುವ ಏಡ್ಸ್ ಪೀಡಿತ ಮಕ್ಕಳಿಗೆ ಸಹಾಯ ಹಸ್ತ ಕಾರ್ಯಕ್ರಮ



ಮಾದರಿಯಾಗಿದೆ ಎಂದರು. ಈ ಸಂದರ್ಭದಲ್ಲಿ ಡಾ॥ ಸಂಜಯ ಪೋರವಾಲ, ಡಾ॥ ವೈಶಾಲಿ ಕೇಳುಸಕರ, ಸಮಾಜ ಸೇವಕರಾದ ಶ್ರೀ ಶಿವಾಜಿ ಕಾಗಣಿಗರ, ರಿದ್ಧಿ ಸಿದ್ಧಿ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಶ್ಯಾಮ ಜಾಧವ ಉಪಸ್ಥಿತರಿದ್ದರು.

ಮೊದಲಿಗೆ ಪ್ರಾರ್ಥನೆಯನ್ನು ನಂದನ ಧಾಮದ ಮಕ್ಕಳಿಂದ ನೇರವೇರಿಸಿದರೆ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಯನ್ನು ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜುನಾಥ ಭೂತೆ ನೆರವೇರಿದರು. ಈ ಸಂದರ್ಭದಲ್ಲಿ ನಂದನ ಮಕ್ಕಳ ಧಾಮದ ಸಂಚಾಲಕರು ಆಡಳಿತ ಮಂಡಳಿಯ ಸದಸ್ಯರು ಸೇರಿದಂತೆ ನೂರಾರು ಸಹಕಾರಿಗಳು ಹಾಜರಿದ್ದರು.

# ಶಿವಮೊಗ್ಗ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಿಂದ ಪತ್ರಿಕಾಗೋಷ್ಠಿ



ದಿನಾಂಕ : 05-04-2015ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಶಿವಮೊಗ್ಗದಲ್ಲಿ ಮಾಧ್ಯಮದವರನ್ನು ಉದ್ದೇಶಿಸಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕಳೆದ 15 ವರ್ಷದ ಸೌಹಾರ್ದ ಸಹಕಾರಿಯ ಚಳುವಳಿ, ಸಹಕಾರ ರಂಗ ಬೆಳೆದುಬಂದಿರುವ ದಾರಿ ಕುರಿತು ವಿವರಿಸಿದರು. ರಾಜ್ಯದಲ್ಲಿ ಒಟ್ಟು 3200 ಸೌಹಾರ್ದ ಸಹಕಾರಿಗಳಿದ್ದು, ಸುಮಾರು 450 ಕೋಟಿ ರೂ. ಷೇರು ಬಂಡವಾಳ, 8500 ಕೋಟಿ ರೂ. ಠೇವಣಿ, 650 ಕೋಟಿ ರೂ. ಕಾಯ್ದಿಟ್ಟ ನಿಧಿ, 10,000 ಕೋಟಿ ರೂ. ದುಡಿಯುವ ಬಂಡವಾಳ, 6500 ಕೋಟಿ ರೂ. ಸಾಲ ನೀಡಿಲಾಗಿದೆ, 160 ಕೋಟಿ ಲಾಭ ಇದೆ ಹಾಗೂ ಈ ಕ್ಷೇತ್ರದಲ್ಲಿ 25 ಲಕ್ಷ ಸದಸ್ಯರಿದ್ದು 25,000 ಜನರು ಉದ್ಯೋಗದಲ್ಲಿದ್ದಾರೆ ಎಂದರು.

ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಉಂಟಾಗುತ್ತಿರುವ ಗೊಂದಲದ ನಿವಾರಣೆಗಾಗಿ ಸಂಯುಕ್ತ ಸಹಕಾರಿಯು ಪ್ರಯತ್ನಿಸುತ್ತಿದೆ ಎಂದು ತಿಳಿಸಿದರು. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಮಾಧ್ಯಮದವರು ಗಮನಹರಿಸಿ ಪ್ರಚಾರ ನೀಡಬೇಕು ಎಂದು ಕೋರಿದರು.

# ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಅಧಿಕಾರಿಗಳಿಂದ ನೋಟೀಸ್ ವಿಚಾರವಾಗಿ ಹಿರಿಯ ಅಧಿಕಾರಿಗಳ ಜೊತೆಗೆ ಸಮಾಲೋಚನೆ - ಶ್ರೀ ಗುರುನಾಥ ಜಾಂತಿಕರ್

ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಬರುತ್ತಿರುವ ಬಗ್ಗೆ ಶಿವಮೊಗ್ಗ ಜಿಲ್ಲೆಯ ಅಧ್ಯಕ್ಷರು ಹಾಗೂ ಮುಖ್ಯಕಾರ್ಯ ನಿರ್ವಾಹಕರೊಂದಿಗೆ ಸಮಾಲೋಚನಾ ಸಭೆಯನ್ನು ದಿನಾಂಕ 05.04.2015ರಂದು ಶಿವಮೊಗ್ಗದ ಮಧುರ ಪಾರಡೈಸ್‌ನಲ್ಲಿ ಏರ್ಪಡಿಸಲಾಗಿತ್ತು. ಸಮಾಲೋಚನಾ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್‌ರವರು ನೆರವೇರಿಸಿ, ಸಹಕಾರಿ ಸಂಸ್ಥೆಗಳು ಆದಾಯ ತೆರಿಗೆ ಇಲಾಖೆಯಿಂದ ಬರುತ್ತಿರುವ ನೋಟೀಸ್‌ಗಳ ಬಗ್ಗೆ ಭಯಪಡುವ ಅವಶ್ಯಕತೆ ಇಲ್ಲ ಏಕೆಂದರೆ ಸೌಹಾರ್ದ ಸಹಕಾರಿಗಳು ಯಾವುದೇ ಆದಾಯ ತೆರಿಗೆ ಭರಿಸುವಂತಿಲ್ಲವೆಂದು ನ್ಯಾಯಾಲಯದಿಂದ ಸಾಕಷ್ಟು ಜಡ್ಜ್ ಮೆಂಟ್‌ಗಳು ಬಂದಿವೆ. ಹಾಗಿದ್ದರು ಕೂಡ ಆದಾಯ ತೆರಿಗೆ ಇಲಾಖೆಯಿಂದ ಸಹಕಾರಿ ಸಂಸ್ಥೆಗಳಿಗೆ ನೋಟೀಸ್ ಬಂದಿದ್ದು, ನ್ಯಾಯಾಲಯದ ಉಲ್ಲಂಘನೆ ಮಾಡಿದಂತಾಗಿದೆ. ಈ ಬಗ್ಗೆ ರಾಜ್ಯಾದಂತ್ಯ ಆದಾಯ ತೆರಿಗೆ ಆಯುಕ್ತರಿಗೆ ಮಾಹಿತಿ ಹಾಗೂ ಮನವಿಯನ್ನು ನೀಡುವ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಪ್ರಾಸ್ತಾವಿಕ ಹಾಗೂ ಸ್ವಾಗತವನ್ನು ಕೋರಿ, ಆದಾಯ ತೆರಿಗೆ ಅಧಿಕಾರಿಗಳು ತಮ್ಮ ಗುರಿಯನ್ನು ಸಾಧಿಸಲಿಕ್ಕೆ ಅನಾವಶ್ಯಕವಾಗಿ ಸಹಕಾರಿಗಳಿಗೆ ನೋಟೀಸ್‌ನ್ನು ಜಾರಿ ಮಾಡಲಾಗುತ್ತಿದೆ. ಈ ಕುರಿತು ಸಿಬಿಡಿಟಿಗೆ ಪತ್ರ ಬರೆಯಲಾಗಿದೆ. ಈ



ಕುರಿತು ಸ್ಪಷ್ಟತೆ ನೀಡಲು ಕೋರಿದೆ ಎಂದು ತಿಳಿಸಿದರು. ಸಂಯುಕ್ತ ಸಹಕಾರಿ 2015-16ರ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಬಗ್ಗೆ ಮಾಹಿತಿ ನೀಡಿದರು.

ಸಭೆಗೆ ಮುಖ್ಯಅತಿಥಿಗಳಾಗಿ ಹಾಗೂ ಉಪನ್ಯಾಸಕರಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ. ರವೀಂದ್ರನಾಥ ಆಗಮಿಸಿ ಆದಾಯ ತೆರಿಗೆ ವಿನಾಯತಿಗಳ ಬಗ್ಗೆ ಹಾಗೂ ಸೌಹಾರ್ದ ಸಹಕಾರಗಳಿಗೆ/ಸಹಕಾರಿ ಸಂಸ್ಥೆಗಳಿಗೆ ಯಾವ ಸೇವಾ ತೆರಿಗೆಗಳು ಅನ್ವಯಿಸುತ್ತವೆ, ಯಾವ ಕಲಂ ಅಡಿ ಬರುತ್ತವೆ ಮತ್ತು ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಬರುವ ನೋಟೀಸ್‌ಗಳಿಗೆ ಯಾವ ರೀತಿ ಉತ್ತರಿಸಬೇಕು ಹಾಗೂ ಅವುಗಳನ್ನು ನಿಭಾಯಿಸುವ ರೀತಿಯ ಬಗ್ಗೆ ಎರಡು ತಾಸುಗಳವರೆಗೆ ಸಹಕಾರಿ ಪ್ರತಿನಿಧಿಗಳಿಗೆ ಮಾಹಿತಿ ನೀಡಿದರು. ಸದರಿ ಸಭೆಯಲ್ಲಿ 70 ಪ್ರತಿನಿಧಿ ಸಹಕಾರಿಗಳು ಭಾಗವಹಿಸಿ ಪ್ರಯೋಜನ ಪಡೆದಿದ್ದಾರೆ.

# ಸಂಯುಕ್ತ ಸಹಕಾರಿಯ ನೂತನ ಸಿಬ್ಬಂದಿಯವರಿಗೆ ಪ್ರಾರಂಭಿಕ ತರಬೇತಿ

## ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಿ – ಶ್ರೀ ಗುರುನಾಥ ಜಾಂತಿಕರ್




ಸಂಯುಕ್ತ ಸಹಕಾರಿಗೆ ನೂತನವಾಗಿ ನೇಮಕವಾಗಿರುವ 22 ಸಿಬ್ಬಂದಿಯವರಿಗೆ ದಿನಾಂಕ : 06–04–2015 ರಿಂದ 10–04–2015 ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಪ್ರಾರಂಭಿಕ ಕಾರ್ಯನಿರ್ವಹಣಾ ತರಬೇತಿಯನ್ನು ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ವೇಗದಲ್ಲಿದೆ. ಸೌಹಾರ್ದ ಸಹಕಾರಿಗಳ ಸಂಖ್ಯೆ ಹಾಗೂ ಪ್ರಗತಿ ದಿನದಿಂದ ದಿನಕ್ಕೆ ಹೆಚ್ಚುತಲಿದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಜವಾಬ್ದಾರಿ ಹೆಚ್ಚಿದೆ. ಈ ಜವಾಬ್ದಾರಿಯನ್ನರಿತು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಕಾರ್ಯನಿರ್ವಹಿಸಬೇಕಿದೆ. ಅದಕ್ಕಾಗಿ ಕಾಯ್ದೆಯ ವಿಷಯಗಳು ಮೊದಲ್ಗೊಂಡು ಸಹಕಾರಿ ಕ್ಷೇತ್ರದ ಮಾಹಿತಿಯನ್ನು ಚೆನ್ನಾಗಿ ಅರಿತುಕೊಳ್ಳುವುದು ಅವಶ್ಯಕವೆಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಶ್ರೀ ವಸಂತ ನಾಯಕ್‌ರವರು ಸಂಯುಕ್ತ ಸಹಕಾರಿ ಕಾರ್ಯಚಟುವಟಿಕೆಗಳು ಪರಿಣಾಮಕಾರಿಯಾಗಿ ನಡೆಯಬೇಕಾದರೆ ಇಂತಹ ತರಬೇತಿ ಕಾರ್ಯಕ್ರಮಗಳು ಅವಶ್ಯಕವಾಗಿವೆ ಎಂದು ಹೇಳಿ ಎಲ್ಲ ಪ್ರತಿನಿಧಿಗಳಿಗೆ ಶುಭಕೋರಿದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ. ಕುಮಾರರವರು ವಂದಿಸಿದರು.

ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರುಗಳಾಗಿ ಶ್ರೀ ಸಿ.ಎನ್. ಪರಶಿವಮೂರ್ತಿ, ಶ್ರೀ ಎಸ್.ಎ.ಸಿದ್ಧಾಂತಿ, ಶ್ರೀ ಬಿ.ಎ.ಮಹದೇವಪ್ಪ, ಶ್ರೀ ವೈ.ವಿ.ಗುಂಡೂರಾವ್, ಶ್ರೀ ರವಿ ಪ್ರಕಾಶ, ಶ್ರೀ ಮಧುಕರ ಹೆಗಡೆ, ಶ್ರೀ ಎಮ್.ಸಿ.ಪಾಲನೇತ್ರಪ್ಪ ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್, ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರ, ಉಪಪ್ರಧಾನ ವ್ಯವಸ್ಥಾಪಕ ಶ್ರೀ ನಾರಾಯಣ ಹೆಗಡೆ, ಅಧಿಕಾರಿಗಳಾದ ಶ್ರೀ ಎಸ್.ಜಿ.ಟೋಪಣ್ಣವರ, ಶ್ರೀ ಶ್ರೀಕಾಂತ ಬರುವೆ, ಶ್ರೀ ರಘುನಂದನ, ಶ್ರೀಮತಿ ಶೋಭಾ, ಶ್ರೀ ಗುರುಪ್ರಸಾದ, ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನ ಮುಂತಾದವರು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ತರಬೇತಿ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಸತೀಶಚಂದ್ರ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ ಅವರುಗಳು ಶ್ರೀ ಸರಸ್ವತಿ ಸೌಹಾರ್ದ ಸಹಕಾರಿ ಪುತ್ತೂರು, ದಿ ಪಾವಗಡ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಕೋಲಾರ ಹಾಗೂ ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಾಗರ ಇವುಗಳ ಕಾರ್ಯಚಟುವಟಿಕೆಗಳ ಬಗ್ಗೆ ವಿವರ ನೀಡಿದರು.



# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ವಾರ್ಷಿಕ ಕ್ರಿಯಾ ಯೋಜನಾ ಸಭೆ



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 2015–16ನೇ ಸಾಲಿನ ಕ್ರಿಯಾ ಯೋಜನೆಯು ದಿನಾಂಕ : 11–04–2015 ರಂದು ಮರಾಠಿ ಸೇವಾ ಸಮಾಜ ಸಂಘ (ರಿ) ಕೊಂಬೆಟ್ಟು ಪುತ್ತೂರು ಇದರ ಸಭಾಭವನದಲ್ಲಿ ನಡೆಯಿತು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ ವಹಿಸಿದ್ದರು. ಉದ್ಘಾಟನೆಯನ್ನು ಎಸ್.ಡಿ.ಪಿ. ರೆಮಿಡೀಸ್ & ರಿಸರ್ಚ್ ಸೆಂಟರ್, ಪರ್ಲಡ್ಕ ಪುತ್ತೂರು ಇದರ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಹರಿಕೃಷ್ಣ ಪಾಣಾಜೆ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಪುತ್ತೂರು ಟೌನ್ ಕೋ–ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ವಿಶ್ವಾಸ್ ಶೆಣೈ ಹಾಗೂ ವೇದಿಕೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರಿನ ಆರ್.ಐ.ಸಿ.ಎಂ.ನ ನಿವೃತ್ತ ರೀಜನಲ್ ಡೈರೆಕ್ಟರ್ ಡಾ. ಎಸ್.ಎ. ಸಿದ್ಧಾಂತಿ ಹಾಗೂ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎ ವಸಂತ್ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಹರಿಕೃಷ್ಣ ಪಾಣಾಜೆಯವರು ಮಾತನಾಡಿ ಮಾನವೀಯ ಸಂಬಂಧಗಳು ತೆರೆದುಕೊಂಡಾಗ ಭಾಂದವ್ಯ ವೃದ್ಧಿಸುತ್ತದೆ, ಭಗವದ್ಗೀತೆಯ ಸಾರಾಂಶವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಜೀವನದಲ್ಲಿ ಯಶಸ್ಸನ್ನು ಸಾಧಿಸುವುದರೊಂದಿಗೆ ನಮ್ಮ ಗುರಿಯನ್ನು ಸಾಧಿಸಬಹುದು ಹಾಗೂ ಸಹಕಾರಿಯು ಸಹಕಾರಿ ರಂಗದಲ್ಲಿ ಉನ್ನತ ಮಟ್ಟಕ್ಕೇರಲಿ ಎಂದು ಹಾರೈಸಿದರು. ಅತಿಥಿಗಳಾಗಿ ಆಗಮಿಸಿದ ಪುತ್ತೂರು ಟೌನ್ ಕೋ–ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ವಿಶ್ವಾಸ್ ಶೆಣೈ ಮಾತನಾಡಿ ಸರಸ್ವತಿ ಸಹಕಾರಿಯು ಗ್ರಾಹಕರಿಗೆ ಉತ್ತಮ ರೀತಿಯಲ್ಲಿ ಸೇವೆ ನೀಡುತ್ತಿರುವುದರ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರರ ಮಾತನಾಡಿ 2014–15 ಸಾಲಿನಲ್ಲಿ ಯಶಸ್ಸನ್ನು ಸಾಧಿಸಲು ಸಹಕರಿಸಿದ ಗೌರವಾನ್ವಿತ ಸದಸ್ಯ ಭಾಂದವರಿಗೆ, ನಿರ್ದೇಶಕರಿಗೆ, ಹಾಗೂ ಸಹಕಾರಿಯ ಸಿಬ್ಬಂದಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದರು, ಹಾಗೂ ಸಹಕಾರಿಯ ಸಾಧನೆ, ಸಹಕಾರಿಗೆ ಒಲಿದ ಪುರಸ್ಕಾರ, ಎಂದು ಬಣ್ಣಿಸಿ ಮುಂದಿನ ಯೋಜನೆಗಳ ಬಗ್ಗೆ ಪ್ರಸ್ತಾಪಿಸಿದರು.

ಕಾರ್ಯಕ್ರಮದಲ್ಲಿ ಕು.ರಂಜಿತಾ ಪ್ರಾರ್ಥಿಸಿದರು, ವಿಜೇತ್ ತುಂಬೆ ಸ್ವಾಗತಿಸಿ, ಶಿವಪ್ರಸಾದ್ ಪೆರುವಾಜೆ ಕಾರ್ಯಕ್ರಮ ನಿರೂಪಿಸಿದರು.

ತರಬೇತು ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಆರ್.ಐ.ಸಿ.ಎಮ್ ಬೆಂಗಳೂರು ಇದರ ನಿವೃತ್ತ ರೀಜನಲ್ ಡೈರೆಕ್ಟರ್ ಡಾ. ಎಸ್.ಎ. ಸಿದ್ಧಾಂತಿಯವರು Balance Sheet Analysis ಬಗ್ಗೆ ತರಬೇತಿ ನೀಡಿದರು. Balance Sheet ಬಗ್ಗೆ ವಿಶ್ಲೇಷಿಸಿದರು, ಸಹಕಾರಿಯಲ್ಲಿ Low cost of fund ನ್ನು ಹೆಚ್ಚಿಸುವುದು ಹಾಗೂ Cost of fund ಕಡಿಮೆಗೊಳಿಸುವುದರ ಬಗ್ಗೆ ವಿವರಿಸಿದರು ವಿವರಿಸಿ, ಆಡಳಿತಾತ್ಮಕ ವೆಚ್ಚವನ್ನು ಕಡಿಮೆಗೊಳಿಸುವಂತೆ ಹೇಳಿದರು.

ತರಬೇತು ಕಾರ್ಯಕ್ರಮದ ನಂತರ ಶಾಖೆಗಳಿಂದ ಅಂಕಿ ಅಂಶ ಮತ್ತ ಉಲ್ಲೇಖನೀಯ ಅಂಶಗಳ ಮಂಡನೆಯಲ್ಲಿ ಶಾಖಾ ವ್ಯವಸ್ಥಾಪರು ಹಾಗೂ ಸಹ ಶಾಖಾ ವ್ಯವಸ್ಥಾಪರು ತಮ್ಮ ಶಾಖೆಗಳ 2014–15ನೇ ಸಾಲಿನ ಅಂಕಿ ಅಂಶ, 2015–16ನೇ ಸಾಲಿನ ಗುರಿಗಳು ಹಾಗೂ ಉಲ್ಲೇಖನೀಯ ಅಂಶಗಳನ್ನು ಪ್ರಸ್ತಾಪಿಸಿದರು.

ನಿರ್ದೇಶಕರಾದ ಶ್ರೀ ಆರ್.ಕೆ. ನಾಯಕ್‌ರವರು ಮಾತಾನಾಡಿ, ಶಾಖೆಗಳಲ್ಲಿ ಆವರ್ತನ ಖಾತೆಗಳ ಸಂಖ್ಯೆ ಕಡಿಮೆ ಇದ್ದು ಮುಂದಿನ ಆರ್ಥಿಕ ವರ್ಷಾಂತ್ಯಕ್ಕೆ ಪ್ರತಿ ಶಾಖೆಯ ಉಳಿತಾಯ ಖಾತೆಯ ಶೇ.50 ರಷ್ಟು ಆವರ್ತನ ಖಾತೆಯನ್ನು ಹೆಚ್ಚಿಸುವುದರೊಂದಿಗೆ ಮುಂದಿನ ಠೇವಣಿ ಗುರಿಯನ್ನು ತಲುಪಲು ಅದು ಸಹಕಾರಿಯಾಗುತ್ತದೆ ಎಂದರು.

ಸಮಾರೋಪ ಕಾರ್ಯಕ್ರಮದಲ್ಲಿ ಸಹಕಾರಿಯ ಪ್ರಧಾನ ವ್ಯವಸ್ಥಾಪಕರು ಮಾತನಾಡಿ, ಸಹಕಾರಿಯ 2014–15ನೇ ಸಾಲಿನ ಗುರಿ ತಲುಪಲು ಮಾರ್ಗದರ್ಶನ ನೀಡಿ ಸಹಕರಿಸಿದ ಎಲ್ಲಾ ಸದಸ್ಯ ಭಾಂದವರಿಗೆ, ಸಲಹೆ ಸೂಚನೆಗಳನ್ನು ನೀಡಿದ ಅಧ್ಯಕ್ಷರಿಗೆ ಹಾಗೂ ಎಲ್ಲಾ ನಿರ್ದೇಶಕ ವೃಂದದವರಿಗೆ, ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ಕೃತಜ್ಞತೆ ಸಲ್ಲಿಸಿ, 2015–16ನೇ ಸಾಲಿನ ಗುರಿಯನ್ನು ತಲುಪುವಲ್ಲಿ ಪ್ರತಿಯೊಬ್ಬ ಸಿಬ್ಬಂದಿಯು ಶ್ರಮಿಸಬೇಕೆಂದು ಹೇಳಿದರು.

## ಪ್ರಕಟಣೆಗಳು

ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ದೂರ ಶಿಕ್ಷಣ ಹೆಚ್.ಡಿ.ಸಿ. ತರಬೇತಿ (Correspondence course in H.D.C. (Higher Diploma Course)

ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯವರು ದಿನಾಂಕ : 06/07/2015 ರಿಂದ 05/03/2016 ರವರೆಗೆ ಸಹಕಾರ ಉನ್ನತ ಡಿಪ್ಲೋಮಾ ತರಬೇತಿಯನ್ನು ನಡೆಸುವುದಾಗಿ ತಮ್ಮ ಪತ್ರ ದಿನಾಂಕ : 23/–4/2015ರಂದು ನಡೆಸುವುದಾಗಿ ತಿಳಿಸಿದ್ದಾರೆ. ತರಬೇತಿ 36 ವಾರಗಳದ್ದಾಗಿದ್ದು, 3 ಸೆಮೆಸ್ಟರ್‌ಗಳದ್ದಾಗಿರುತ್ತದೆ. ತರಬೇತಿ ಶುಲ್ಕ ರೂ. 8000/– ತೆರಿಗೆ 14% ರೂ. 1120 ಸೇರಿ ಒಟ್ಟು ರೂ.9120 ಗಳಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ಕಾರ್ಯಕ್ರಮ ಸಂಚಾಲಕರು ಶ್ರೀ ಪಿ.ಎಸ್.ಸುರೇಶ ದೂರವಾಣಿ ಸಂಖ್ಯೆ 7411007095 ಕಚೇರಿ ದೂರವಾಣಿ ಸಂಖ್ಯೆ : 080 26692036 / 080 26690584 ಇವರನ್ನು ಸಂಪರ್ಕಿಸಬಹುದಾಗಿದೆ.




ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ಶಿರಸಿಯವರು ಓಪನಿಂಗ್ ಫೋಟೋಗ್ರಾಫಿ ಸ್ಪರ್ಧೆಯನ್ನು ಏರ್ಪಡಿಸಿರುತ್ತಾರೆ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : Manjunath Hegde (9483613900, 9036478230 Kadamba Marketing Sirsi.contact@kadambamarketing.com.




## ಬದಲಾದ ಆರ್‌ಬಿಐ ಆದ್ಯತಾ ವಲಯ ಸಾಲದ ನೀತಿ

**ಮುಂಬೈ :** ಆದ್ಯತಾ ವಲಯಕ್ಕೆ ನೀಡುವ ಸಾಲಕ್ಕೆ ಸಂಬಂಧಿಸಿದ ನಿರ್ದೇಶನಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಪರಿಷ್ಕರಣೆ ಮಾಡಿದೆ. ಒಟ್ಟು ಸಾಲದಲ್ಲಿನ ಶೇ. 8ರಷ್ಟನ್ನು ಸಣ್ಣ ಹಾಗೂ ಮಧ್ಯಮ ವರ್ಗದ ರೈತರಿಗೆ ಮೀಸಲಿಡುವಂತೆ ಎಲ್ಲ ಬ್ಯಾಂಕ್‌ಗಳಿಗೆ ಆರ್‌ಬಿಐ ಸ್ಪಷ್ಟ ಸೂಚನೆ ನೀಡಿದೆ. ಮಧ್ಯಮ ಗಾತ್ರದ ಉದ್ಯಮ, ಸಾಮಾಜಿಕ ಮೂಲ ಸೌಕರ್ಯ, ನವೀಕರಿಸಬಹುದಾದ ಇಂಧನಗಳನ್ನು ಸಹ ಆದ್ಯತಾ ವಲಯದೊಳಕ್ಕೆ ಸೇರಿಸಲಾಗಿದೆ ಎಂದು ತಿಳಿಸಿದೆ. ಸಾಲ ನೀಡಿಕೆ ಗುರಿಯಲ್ಲೂ ಕೆಲ ಮಹತ್ತರ ಬದಲಾವಣೆ ಮಾಡಲಾಗಿದೆ. 2016ರ ಮಾರ್ಚ್ ಒಳಗೆ ಶೇ. 7 ಮತ್ತು 2017ರ ಮಾರ್ಚ್ ಒಳಗೆ ಶೇ. 8ರ ಗುರಿ ಸಾಧನೆಯಾಗಬೇಕು ಎಂದು ಹೇಳಿದೆ.

ಪ್ರಧಾನ ಮಂತ್ರಿ ಜನ ಧನ ಯೋಜನೆಯನ್ನು ಕೂಡ ಆದ್ಯತಾ ವಲಯದ ಸಾಲವನ್ನಾಗಿ ಪರಿಗಣಿಸಲಾಗುವುದು. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೀಡುತ್ತಿರುವ ಸಾಲ, ಮೂಲ ಸೌಕರ್ಯ ಅಭಿವೃದ್ಧಿಗೆ ಸಾಲದಲ್ಲಿನ ಕೆಲ ಮಾರ್ಪಾಡುಗಳಿಗೆ ಆರ್‌ಬಿಐ ಹಸಿರು ನಿಶಾನೆ ತೋರಿದೆ. 2019–20 ರ ವೇಳೆಗೆ ಗುರಿ ಸಾಧನೆಯಾದರೆ ದೇಶದ ಆರ್ಥಿಕ ಅಭಿವೃದ್ಧಿಯ ಪಥ ಬದಲಾಗಲಿದೆ. ವಿದೇಶಿ ಬ್ಯಾಂಕ್‌ಗಳಿಂದಲೂ ಇದಕ್ಕೆ ಹಣಕಾಸು ನೆರವು ಪಡೆದುಕೊಳ್ಳಲಾಗುವುದು ಎಂದು ರಿಸರ್ವ್ ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ.

# ಸಂಪನ್ಮೂಲ ವ್ಯಕ್ತಿಗಳ ಸಭೆ : ತರಬೇತಿ ಕಾರ್ಯಕ್ರಮಗಳ ಗುಣಮಟ್ಟ ತೃಪ್ತಿಕರ; ವ್ಯಾಪಕ ತರಬೇತಿ ಕಾರ್ಯಕ್ರಮಗಳು ಅಗತ್ಯ- ಸಿ.ಎನ್. ಪರಶಿವಮೂರ್ತಿ

**ತರಬೇತಿ ಕಾರ್ಯಕ್ರಮಗಳ ಗುಣಮಟ್ಟ ತೃಪ್ತಿಕರವಾಗಿದೆ. ಮುಂಬರುವ ದಿನಗಳಲ್ಲಿ ಇದೇ ರೀತಿ ವ್ಯಾಪಕವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಸಂಯುಕ್ತ ಸಹಕಾರಿಯ ಅಧಿಕಾರಿಗಳು ತಾವೆ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸುವ ಮಟ್ಟಕ್ಕೆ ಬೆಳೆಯಬೇಕಿದೆ. ಈ ನಿಟ್ಟಿನಲ್ಲಿ ಈಗಾಗಲೇ ಹಲವಾರು ಅಧಿಕಾರಿಗಳು ಸಿದ್ಧರಾಗಿದ್ದಾರೆ. ಇನ್ನೂ ಹೆಚ್ಚಿನ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಬೆಳೆಯುವ ಅಗತ್ಯತೆ ಇದೆ.**

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿಯು ಹಮ್ಮಿ ಕೊಳ್ಳುತ್ತಿರುವ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಪರೋಕ್ಷವಾಗಿ ಸೌಹಾರ್ದ ಸಹಕಾರಿ ಅಭಿವೃದ್ಧಿಗೆ ಕಾರಣಿಕರ್ತರಾಗಿರುವ ಸಂಪನ್ಮೂಲ ವ್ಯಕ್ತಿಗಳ ಸಭೆಯನ್ನು ದಿನಾಂಕ 24 ಮೇ 2015 ರಂದು ಹೋಟೆಲ್ ಪಾರಿಜಾತ ಗೇಟವೇನಲ್ಲಿ ನಡೆಸಲಾಯಿತು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಅಧ್ಯಕ್ಷತೆ ವಹಿಸಿದ್ದರು.



ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಸ್. ಆರ್.ಸತೀಶಚಂದ್ರ, ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀಮತಿ ಮಂಜುಳಾ ಪಾಟೀಲ್, ಶ್ರೀ ರವಿ ಎಲೆಗಾರ, ಶ್ರೀ ಸಣ್ಣಸೂಗಪ್ಪ, ಶ್ರೀ ಭಾಸ್ಕರ ಕಾಮತ ಶ್ರೀ ಶಿವರುದ್ರಪ್ಪ, ಶ್ರೀ ಶಾಂತಿನಾಥ ಪಂಡಿತ, ಮುಂತಾದವರು ಉಪಸ್ಥಿತರಿದ್ದರು.

ಸಭೆಯಲ್ಲಿ ಸಹಕಾರ, ಆಡಳಿತ, ಬ್ಯಾಂಕಿಂಗ್, ಮಾನವಸಂಪನ್ಮೂಲ ವಿಭಾಗ, ಮಾಧ್ಯಮಗಳ ವಿಭಾಗ, ಲೆಕ್ಕಪತ್ರವಿಭಾಗ ಲೆಕ್ಕಪರಿಶೋಧನಾ ವಿಭಾಗ ಹೀಗೆ ವಿವಿಧ ಕ್ಷೇತ್ರದ ಪರಿಣಿತಿ ಹೊಂದಿರುವ 36 ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು.

ಸಭೆಯನ್ನು ಶ್ರೀಮತಿ ಸವಿತಾರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನು ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲರವರು ನೆರವೇರಿಸಿದರು. ಶ್ರೀ ಸಿ.ಎನ್. ಪರಶಿವಮೂರ್ತಿಯವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಉತ್ತಮವಾಗಿ ನಡೆಯುತ್ತಿವೆ. ತರಬೇತಿ ಕಾರ್ಯಕ್ರಮಗಳ ಗುಣಮಟ್ಟ ತೃಪ್ತಿಕರವಾಗಿದೆ. ಮುಂಬರುವ ದಿನಗಳಲ್ಲಿ ಇದೇ ರೀತಿ ವ್ಯಾಪಕವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಸಂಯುಕ್ತ ಸಹಕಾರಿಯ ಅಧಿಕಾರಿಗಳು ತಾವೆ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸುವ ಮಟ್ಟಕ್ಕೆ ಬೆಳೆಯಬೇಕಿದೆ. ಈ ನಿಟ್ಟಿನಲ್ಲಿ ಈಗಾಗಲೇ ಹಲವಾರು ಅಧಿಕಾರಿಗಳು ಸಿದ್ಧರಾಗಿದ್ದಾರೆ. ಇನ್ನೂ ಹೆಚ್ಚಿನ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಬೆಳೆಯುವ ಅಗತ್ಯತೆ ಇದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಈ ಬಗ್ಗೆ ಗಮನ ಹರಿಸುವುದು ಉತ್ತಮ ಎಂದು ತಿಳಿಸಿದರು.

ಶ್ರೀ ಬಿ.ಎ.ಮಹದೇವಪ್ಪ, ಡಾ ನಂದೀಶ ಹಿರೇಮಠ, ಶ್ರೀ ಮಧುಕರ ಹೆಗಡೆ, ಶ್ರೀ ಬಿ.ಆರ್.ರವೀಂದ್ರನಾಥ, ಶ್ರೀ ಸಿದ್ದುಯಾಪಲಪರ್ವಿ, ಶ್ರೀ ಶ್ಯಾಂಪ್ರಸಾದ ಶ್ರೀ ಫಾಲನೇತ್ರಪ್ಪ ಮುಂತಾದವರು ಮಾತನಾಡಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ಸಂಘಟಿಸಲಾಗುತ್ತಿದೆ.

ಕಾರ್ಯಕ್ರಮಗಳಲ್ಲಿ ವಿಷಯಗಳ ಆಯ್ಕೆಗೆ, ಸಮಯನಿರ್ವಹಣೆಗೆ ವಿಷಯ ಪ್ರಸ್ತಾವನೆಗೆ ಹಾಗೂ ಸಾಮೂಹಿಕ ಚರ್ಚೆಗಳಿಗೆ ಉತ್ತಮ ಅವಕಾಶ ನೀಡಲಾಗುತ್ತಿದೆ. ಉತ್ತಮ ಅಧ್ಯಯನ ಸಾಹಿತ್ಯವನ್ನು ಸಿದ್ಧಪಡಿಸಲಾಗುತ್ತಿದೆ. ವ್ಯವಸ್ಥೆಗಳು ಚೆನ್ನಾಗಿರುತ್ತವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ಎಸ್.ಆರ್. ಸತೀಶಚಂದ್ರರವರು ಮಾತನಾಡಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅಪಾರ ಕಾಣಿಕೆಯನ್ನು ನೀಡಿದ್ದಾರೆ. ಅವರೆಲ್ಲರಿಗೂ ಸಂಯುಕ್ತ ಸಹಕಾರಿಯು ಆಭಾರಿಯಾಗಿದೆ ಎಂದರು.

# ಸಂಪನ್ಮೂಲ ವ್ಯಕ್ತಿಗಳು ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಯಶಸ್ಸಿಗೆ ಮಹತ್ವದ ಪಾತ್ರ ನಿರ್ವಹಿಸಿದ್ದಾರೆ - ಗುರುನಾಥ ಜಾಂತಿಕರ



ಸಂಯುಕ್ತ ಸಹಕಾರಿ ಪ್ರಾರಂಭದಿಂದಲೂ ತರಬೇತಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ಇತ್ತೀಚಿನ 5–6 ವರ್ಷಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಎಲ್ಲರನ್ನು ಒಳಪಡಿಸುವ ನಿಟ್ಟಿನಲ್ಲಿ ಈ ತರಬೇತಿ ಕಾರ್ಯಕ್ರಮಗಳನ್ನು ಬಹಳ ಪರಿಣಾಮಕಾರಿಯಾಗಿ ಮತ್ತು ಉತ್ತಮವಾಗಿ ಸಂಘಟಿಸಲಾಗುತ್ತಿದೆ.

ಇವುಗಳ ಯಶಸ್ಸಿಗೆ ಸಂಪನ್ಮೂಲ ವ್ಯಕ್ತಿಗಳೇ ಕಾರಣ. ಅವರಿಗೆ ಕೊಡಲಾಗುವ ವಿಷಯದ ಬಗ್ಗೆ ಆಳವಾದ ಅಧ್ಯಯನಮಾಡಿ, ಶಿಬಿರಾರ್ಥಿಗಳಿಗೆ ಉತ್ತಮ ರೀತಿಯಲ್ಲಿ ಮನವರಿಕೆಮಾಡುವಂತಹ ಪ್ರಯತ್ನವನ್ನು ಮಾಡುತ್ತ ಬಂದಿದ್ದಾರೆ, ತನ್ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸಂಯುಕ್ತ ಸಹಕಾರಿಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಕಾರಣರಾಗಿದ್ದಾರೆ. ಎಲ್ಲರೂ ಅಭಿನಂದನಾರ್ಹರು ಎಂದು ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್ ತಿಳಿಸಿದರು. ಕೊನೆಯಲ್ಲಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ವಂದಿಸಿದರು.



## ರಾಜ್ಯಮಟ್ಟದ ಉದ್ದೇಶಿತ ಬಸವೇಶ್ವರ ಸುದ್ದಿ ಮಾಧ್ಯಮ, ವೃತ್ತಿಪರ ವ್ಯವಹರಣೆ ಮತ್ತು ಆಡಳಿತ ನಿರ್ವಹಣೆ ಸಹಕಾರ ಮಹಾಮಂಡಳ ಬೆಂಗಳೂರು ಇದರ ಪೂರ್ವಭಾವಿ ಸಭೆ – ಸಹಕಾರ ಟಿ.ವಿ. ಹಾಗೂ ಸಹಕಾರ ದಿನಪತ್ರಿಕೆ ಪ್ರಾರಂಭಿಸಲು ಚರ್ಚೆ

ದಿನಾಂಕ : 23–4–2015 ರಂದು ಮಾಜಿ ಸಹಕಾರ ಸಚಿವ ಶ್ರೀ ಎಸ್.ಎಸ್.ಪಾಟೀಲರವರು, ಉದ್ದೇಶಿತ ಬಸವೇಶ್ವರ ಸುದ್ದಿ ಮಾಧ್ಯಮ, ವೃತ್ತಿಪರ ವ್ಯವಹರಣೆ ಮತ್ತು ಆಡಳಿತ ನಿರ್ವಹಣೆ ಸಹಕಾರ ಮಹಾಮಂಡಳ ಬೆಂಗಳೂರು ಇದರ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ರಾಜ್ಯದ ಸಹಕಾರ ಕ್ಷೇತ್ರದ ಬೆಳವಣಿಗೆಗಾಗಿ ವ್ಯಾಪಕ ಪ್ರಚಾರದ ಅಗತ್ಯವಿದೆ. ಪ್ರಸಕ್ತ ವ್ಯವಸ್ಥೆಯಲ್ಲಿ ಸಾಕಷ್ಟು ಪ್ರಚಾರಕಾರ್ಯವಾಗುತ್ತಿಲ್ಲ. ಇದಕ್ಕಾಗಿ ಸಹಕಾರ ಕ್ಷೇತ್ರದಲ್ಲಿಯೇ ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಹುಟ್ಟುಹಾಕುವುದರ ಜೊತೆಗೆ ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆಯನ್ನು ಮತ್ತು ಆಡಳಿತ ನಿರ್ವಹಣೆಯನ್ನು ಸಧೃಡಗೊಳಿಸುವ ನಿಟ್ಟಿನಲ್ಲಿ ರಾಜ್ಯ ಮಟ್ಟದ ಒಂದು ಸಹಕಾರ ಸಂಸ್ಥೆಯ ಅಗತ್ಯತೆಯನ್ನು ಪ್ರತಿಪಾದಿಸಿದ ಮಾಜಿ ಸಹಕಾರ ಸಚಿವ, ಸಹಕಾರ ಕ್ಷೇತ್ರದ ಚಿಂತಕ ಶ್ರೀ ಎಸ್.ಎಸ್.ಪಾಟೀಲ್ ರವರು ತಮ್ಮ ಅಧಿಕಾರಾವಧಿಯಲ್ಲಿ ಈ ಬಗ್ಗೆ ಸಾಕಷ್ಟು ಪ್ರಯತ್ನಗಳು ನಡೆದಿವೆ. ಈಗ ಒಂದು ರಾಜ್ಯಮಟ್ಟದ ಸಹಕಾರ ಸಂಸ್ಥೆಯನ್ನು ಸ್ಥಾಪಿಸಿ ತನ್ಮೂಲಕ ಸಹಕಾರ ಕ್ಷೇತ್ರದ ಬಗ್ಗೆ ಉತ್ತಮ ಪ್ರಚಾರ ವ್ಯವಸ್ಥೆಯನ್ನು ಕಲ್ಪಿಸುವ ಅವಕಾಶದ ಬಗ್ಗೆ ಸಲಹೆ ನೀಡಿದರು.

ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶಚಂದ್ರ, ನಿರ್ದೇಶಕರುಗರಾದ ಶ್ರೀ ಜಿ.ಎನ್.ಪಾಟೀಲ್, ಶ್ರೀ ವೈ.ಟಿ.ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್.ಪರಶಿವಮೂರ್ತಿ ಮುಂತಾದವರು ಭಾಗವಹಿಸಿದ್ದರು. ಈ ಉದ್ದೇಶಿತ ಸಹಕಾರಿ ಸಂಸ್ಥೆಯ ಮೂಲಕ ಸಹಕಾರ ವಿದ್ಯುನ್ಮಾನ ಸುದ್ದಿ (ಪ್ರತ್ಯೇಕ ಟಿ.ವಿ. ಚಾನೆಲ್) ಹಾಗೂ ಪ್ರತ್ಯೇಕ ಸಹಕಾರ ದಿನ ಪತ್ರಿಕೆಯನ್ನು ಪ್ರಕಟಿಸುವುದು ಎಂದು ತಿಳಿಸಿದ ಶ್ರೀ ಪರಶಿವಮೂರ್ತಿಯವರು ಈ ಸಂಸ್ಥೆಯಲ್ಲಿ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳು, ರಾಜ್ಯಮಟ್ಟದ ಹಾಗೂ ಜಿಲ್ಲಾಮಟ್ಟದ ಮತ್ತು ಪ್ರಾಥಮಿಕ ಸಹಕಾರ ಸಂಸ್ಥೆಗಳು ಪಾಲುಬಂಡವಾಳ ಪಡೆಯಲು ಅವಕಾಶವಿದೆ ಎಂದು ತಿಳಿಸಿದರು.

## ಸೌಹಾರ್ದ ಸಹಕಾರಿಗಳ ಗಮನಕ್ಕಾಗಿ


P.K. Bali,
Under Secretary,
Tele: 23013683
FAX: 23015655

Prime Minister's Office
New Delhi - 110011

21-Apr-2015

D.O. No. 82(78)59(2015-PMF

We acknowledge with thanks the generous contribution forwarded towards the Prime Minister's National Relief Fund.

Prime Minister appreciates this thoughtful gesture and conveys his gratitude. This valuable contribution will be of immense help in providing assistance to those affected by the recent floods in Jammu & Kashmir.

A formal receipt is enclosed.

With regards,

Yours faithfully,
(P.K. Bali)

KARNATAKA STATE SOUHARDA FEDERAL COOPERATIVE LIMITED,
BENGALURU

ಕಳೆದ ವರ್ಷ ಜಮ್ಮುಕಾಶ್ಮೀರನಲ್ಲಿ ಸಂಭವಿಸಿದ ನೆರೆಹಾವಳಿ ಯಿಂದ ಹಾನಿಗೊಳಗಾದ ಜನರಿಗೆ ಪರಿಹಾರ ನೀಡುವ ಸಲುವಾಗಿ ಸೌಹಾರ್ದ ಸಹಕಾರಿಗಳು ನೀಡಿದ ಸಹಾಯದ ಮೊತ್ತವನ್ನು ಪ್ರಧಾನ ಮಂತ್ರಿಗಳ ಪರಿಹಾರನಿಧಿಗೆ ಸಲ್ಲಿಸಲಾಗಿತ್ತು.

ಹಣ ಸಂದಾಯವಾಗಿರುವುದಕ್ಕೆ ಮಾನ್ಯ ಪ್ರಧಾನಮಂತ್ರಿಗಳ ಕಚೇರಿಯಿಂದ ಕೃತಜ್ಞತೆಗಳನ್ನು ತಿಳಿಸುವ ಪತ್ರವನ್ನು ಸಹಕಾರಿಗಳ ಗಮನಕ್ಕಾಗಿ ಪ್ರಕಟಿಸಿದೆ.

## ಭೂಕಂಪ ಪರಿಹಾರಕ್ಕಾಗಿ ಉದಾರ ಸಹಾಯಕ್ಕೆ ಮನವಿ



ದಿನಾಂಕ : 25.04.2015 ರಂದು ನೇಪಾಳದಲ್ಲಿ ಹಾಗೂ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಭೂಕಂಪವಾಗಿ ಹತ್ತಾರು ಸಾವಿರ ಜನರು ಪ್ರಾಣ ಕಳೆದುಕೊಂಡಿದ್ದಾರೆ ಹತ್ತಾರು ಸಾವಿರ ಜನ ಗಾಯಗೊಂಡಿದ್ದಾರೆ ಲಕ್ಷಾಂತರ ಜನ ಪೀಡಿತರಾಗಿದ್ದಾರೆ. ಮನೆ-ಮಠ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡಿರುವುದು ಎಲ್ಲ ಸಹಕಾರಿಗಳಿಗೆ ದುಃಖದ ಸಂಗತಿ. ಭೂಕಂಪದಿಂದ ಸಂಭವಿಸಿದ ಹಾನಿ ಮತ್ತು ಅದರಿಂದ ಪೀಡಿತರಾದವರಿಗೆ ತಾತ್ಕಾಲಿಕ ಆಹಾರ, ನೀರು, ಬಟ್ಟೆ ಮತ್ತು ಪುನರ್ವಸತಿಗಳಿಗಾಗಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ನೆರವು ನೀಡುವಲ್ಲಿ ಮುಂದಾಗಿವೆ. ಸಂಘ ಸಂಸ್ಥೆಗಳು ಸಹ ಮುಂದಾಗಿವೆ. ಸಹಕಾರ ಸಂಘ ಸಂಸ್ಥೆಗಳು ಸಹ ಈ ಪರಿಸ್ಥಿತಿಯಲ್ಲಿ ಮುಂದಾಗುವುದು ಅವಶ್ಯಕವೆಂದು ಸಂಯುಕ್ತ ಸಹಕಾರಿಯು ಭಾವಿಸಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಹ ಭೂಕಂಪ ಪೀಡಿತರಿಗೆ ಸಾಂತ್ವನವನ್ನು ಹೇಳುವುದರ ಜೊತೆಗೆ ಅವರಿಗೆ ನೆರವನ್ನು ನೀಡುವ ದೃಷ್ಟಿಯಿಂದ "ಭೂಕಂಪ ಪೀಡಿತರ ಪರಿಹಾರ ನಿಧಿ" ಎಂಬ ಹೆಸರಿನಲ್ಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಂದ ಹಣವನ್ನು ಸಂಗ್ರಹಿಸಿ ಕೇಂದ್ರಕ್ಕೆ ಕಳುಹಿಸಲು ಉದ್ದೇಶಿಸಿದೆ. ಆದ್ದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಉದಾರವಾಗಿ ಹಣಕಳುಹಿಸಿ ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಅಪೇಕ್ಷಿಸುತ್ತದೆ.

ಸೌಹಾರ್ದ ಸಹಕಾರಿಗಳು "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., (KARNATAKA STATE SOUHARDA FEDERALE COOPARETIVE Ltd., ) ಎಂಬ ಹೆಸರಿನಲ್ಲಿ ಚೆಕ್/ಡಿಡಿ ಕಳುಹಿಸಲು ಕೋರಿದೆ. ಅಥವಾ ಸಂಯುಕ್ತ ಸಹಕಾರಿಯ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಖಾತೆ ನಂಬರ್ 1037102040000006, IFSC CODE : KSCB0000001 ಬ್ಯಾಂಕ್‌ಗೆ NEFT/RTGS" ಮೂಲಕ ಕೂಡ ಕಳುಹಿಸಬಹುದಾಗಿದ್ದು, NEFT/RTGS" ಮೂಲಕ ಪಾವತಿಸಿದ ವಿವರಗಳನ್ನು ಪತ್ರ ಮುಖೇನ ಸಂಯುಕ್ತ ಸಹಕಾರಿಗೆ ತಿಳಿಸಲು ಕೋರಿದೆ.

| | |
|---|---|
| ಸಹಿ/- | ಸಹಿ/- |
| **ಗುರುನಾಥ ಜಾಂತಿಕರ್** | **ಹೆಚ್. ವಿ ರಾಜೀವ್** |
| ಅಧ್ಯಕ್ಷರು | ಉಪಾಧ್ಯಕ್ಷರು |

# ಸಂಯುಕ್ತ ಸಹಕಾರಿಯ ಅಧ್ಯಕ್ಷರಿಂದ ವಿವಿಧ ಸಹಕಾರ ಸಂಸ್ಥೆಗಳಿಗೆ ಭೇಟಿ



ವಾಸವಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ.



ಅಭಿನವ ಗವಿಸಿದ್ದೇಶ್ವರ ಸೌಹಾರ್ದ ಸಹಕಾರಿ ನಿ., ಗಂಗಾವತಿ.



ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ ಗಂಗಾವತಿ ನೂತನ ಶಾಖೆ ಉದ್ಘಾಟನೆ



ಹೈದರಬಾದ್ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ




ಮಹಾಗಾಂವ್ ಪತ್ತಿನ ಸೌಹಾರ್ದ ಸಹಕಾರಿ ನಿ., ಕಲಬುರಗಿಗೆ ಭೇಟಿ



ಕಲ್ಯಾಣ ನಾಡು ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿಯಮಿತದ ಮಹಾಗಾಂವ್ ಉದ್ಘಾಟನಾ ಸಮಾರಂಭ

# ಸಹಕಾರ ಸಂಸ್ಥೆಗಳು ಧಾರ್ಮಿಕ ದತ್ತಿಗಳಲ್ಲ; ಹಣಕಾಸು ವ್ಯವಹಾರ ನಡೆಸುವ ಆರ್ಥಿಕ ಸಂಸ್ಥೆಗಳು - ಗುರುನಾಥ ಜಾಂತಿಕರ್

ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ನೋಂದಣೆಯಾಗಿರುವ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳಿಗಾಗಿ ಪ್ರವೇಶ ತರಬೇತಿಯನ್ನು ದಿನಾಂಕ : 23 ಹಾಗೂ24 ಏಪ್ರಿಲ್ 2015 ರಂದು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಕೇಂದ್ರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಈ ತರಬೇತಿಯಲ್ಲಿ 23 ಜಿಲ್ಲೆಗಳಿಂದ 67 ಸೌಹಾರ್ದ ಸಹಕಾರಿಗಳಿಂದ ಒಟ್ಟು 111 ಪ್ರತಿನಿಧಿಗಳು ನೋಂದಣೆ ಮಾಡಿ ಭಾಗವಹಿಸಿದ್ದರು. ತರಬೇತಿಯ ಉದ್ಘಾಟನೆಯನ್ನು ನೇರವೆರಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು, ಪ್ರತಿನಿಧಿಗಳನ್ನು ಉದ್ದೇಶಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿ 15 ವರ್ಷಗಳು ಕಳೆದಿವೆ. ಸ್ವಾಯತ್ತತೆ, ಸ್ವಯಂ ನಿಯಂತ್ರಣ, ಸ್ವಯಂ ಆಡಳಿತ ತಳಹದಿಯ ಮೇಲೆ ಕಾರ್ಯನಿರ್ವಹಿಸುತ್ತ ರಾಜ್ಯದ ಜನತೆಯ, ಸಹಕಾರಿಗಳ ಹಾಗೂ ಸರ್ಕಾರದ ಮಾನ್ಯತೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿವೆ.

ಸೌಹಾರ್ದ ಸಹಕಾರಿ ಸಂಸ್ಥೆಗಳು ಧಾರ್ಮಿಕ ದತ್ತಿಗಳಲ್ಲ, ಹಣಕಾಸು ವ್ಯವಹಾರವನ್ನು ನಡೆಸುವ ಉತ್ತಮ ಆರ್ಥಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿವೆ. ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು ಆಡಳಿತದಲ್ಲಿ ಪರಿಣಿತಿಯನ್ನು, ವೃತ್ತಿ ಕೌಶಲ್ಯತೆಯನ್ನು ಸಿಬ್ಬಂದಿಯವರು ದಕ್ಷತೆಯಿಂದ ಹಾಗೂ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದರೆ ಸಹಕಾರಿಯ ತತ್ವಗಳನ್ನು ಈಡೇರಿಸಲು ನೆರವಾಗುತ್ತದೆ ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್ ಸತೀಶ್‌ಚಂದ್ರರವರು ಮಾತನಾಡಿ ತರಬೇತಿಯಲ್ಲಿ ಉತ್ತಮ ವಿಷಯಗಳನ್ನು ಆಯೋಜಿಸಲಾಗಿದೆ ಅದರ ಸದುಪಯೋಗ ಪಡೆದುಕೊಂಡು ಉತ್ತಮವಾಗಿ ಆರ್ಥಿಕ ವ್ಯವಹಾರವನ್ನು ನಡೆಸಿ ಜೊತೆಗೆ ತಮ್ಮ ವ್ಯಾಪ್ತಿಯಲ್ಲಿ ಸಾಮಾಜಿಕ ಕಾರ್ಯಚಟುವಟಿಕೆಗಳನ್ನು ಮಾಡುವುದರಿಂದ ಸಂಸ್ಥೆಯ ಗೌರವ ಹೆಚ್ಚುತ್ತದೆ ಎಂದು ತಿಳಿಸಿದರು. ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಮುಖ್ಯಅತಿಥಿಗಳಾಗಿ ಶ್ರೀ ವಸಂತನಾಯಕ್, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ ನಾಗರತ್ನರವರು ಮುಂತಾದವರು ಭಾಗವಹಿಸಿದ್ದರು.

ಪ್ರಾಸ್ತಾವಿಕವನ್ನು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು



ಉತ್ತಮವಾಗಿ ಆರ್ಥಿಕ ಪ್ರಗತಿಯನ್ನು ಸಾಧಿಸಲು ಅವಶ್ಯಕವಾಗಿರುವ ಉತ್ತಮ ವಿಷಯಗಳನ್ನು, ಸಂಪನ್ಮೂಲ ವ್ಯಕ್ತಿಗಳನ್ನು 2 ದಿನಗಳ ತರಬೇತಿಯಲ್ಲಿ ಜೋಡಿಸಲಾಗಿದೆ. ತಾವುಗಳು ಈ ಅವಧಿಗಳಲ್ಲಿ, ಚರ್ಚೆಯಲ್ಲಿ ಆಸಕ್ತಿಯಿಂದ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾದ ಡಾ॥ ಎಸ್.ಎ. ಸಿದ್ದಾಂತಿಯವರು ವಿದೇಶದಲ್ಲಿ ಸಹಕಾರ ಚಳುವಳಿ ನಡೆದುಬಂದ ಹಾದಿ, ದೇಶದಲ್ಲಿ ಸ್ವಾತಂತ್ರ್ಯ ಪೂರ್ವ ನಂತರದಲ್ಲಿ ಹೊಸ ಆರ್ಥಿಕ ನೀತಿ ಜಾರಿಯ ನಂತರ ಹಾಗೂ ಸೌಹಾರ್ದ ಸಹಕಾರಿಯ ಯುಗದಲ್ಲಿ ನಡೆದ ಸಹಕಾರ ಚಳುವಳಿಯ ಇತಿಹಾಸವನ್ನು ತಿಳಿಸಿದರು. ಶ್ರೀ ಸಿ.ಎನ್. ಪರಶಿವಮೂರ್ತಿಯವರು 1997ರ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿನ ಆಶಯಗಳನ್ನು ಹಾಗೂ ಮುಖ್ಯಾಂಶಗಳನ್ನು ತಿಳಿಸಿದರು.

ಶ್ರೀ ಮಹಾಬಲಗಿರಿಯವರು ಸಹಕಾರಿಗಳು ಆರ್ಥಿಕ ವ್ಯವಹಾರ ಅಭಿವೃದ್ಧಿ ಪಡಿಸಲು ಅನೇಕ ಸೂತ್ರಗಳೊಂದಿಗೆ ತಿಳಿಸಿದರು.ವ್ಯಾಪಾರ ಅಭಿವೃಧಿ ಯೋಜನೆಗಳನ್ನು ತಯಾರಿಸಿ ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದರ ಮೂಲಕ ಲಾಭದ ಆದಾಯದ ಮೂಲಗಳನ್ನು ಹೆಚ್ಚಿಸಬೇಕೆಂದು ತಿಳಿಸಿದರು. ಡಾ॥ ನಂದೀಶ್ ಹಿರೇಮಠರವರು ಗ್ರಾಹಕರ ಸೇವೆಗಳ ನಿರ್ವಹಣೆ ವಿಷಯದ ಕುರಿತು ಮಾತನಾಡಿದರು. ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀಕಾಂತ ಬರುವೆಯವರು ಸೌಹಾರ್ದ ಸಹಕಾರಿ ಕಾಯ್ದೆಯ ನಿಯಮಗಳು ಹಾಗೂ ಸಂಯುಕ್ತ ಸಹಕಾರಿ ಸುತ್ತೋಲೆಗಳು ವಿಷಯದ ಕುರಿತು ಕಾನೂನು ಅರಿವನ್ನು ಪ್ರತಿನಿಧಿಗಳಿಗೆ ಮಾಡಿಕೊಟ್ಟರು. ■



# ಗ್ರಾಹಕ ಸಂಬಂಧ ನಿರ್ವಹಣೆಯ ಮಹತ್ವ ಮತ್ತು ವಿವಿಧ ಹಂತಗಳು

ಡಾ॥ ನಂದೀಶ ವಿ. ಹಿರೇಮಠ, ಪ್ರೊಫೆಸರ್ ಸಹಕಾರಿ ತರಬೇತುದಾರರು, ಕನಸಲ್ಟಂಟ್ ಮತ್ತು ಆಡಳಿತ ಸಲಹೆಗಾರರು, ಬೆಂಗಳೂರು.

**ಗ್ರಾಹಕ ಸಂಬಂಧ ನಿರ್ವಹಣೆ (Customer Relationship Management, CRM)ಯ ಮಹತ್ವ :** ಪ್ರತಿಯೊಂದು ಸಂಸ್ಥೆಗೂ ಗ್ರಾಹಕ ಅವಿಭಾಜ್ಯ ಅಂಗ, ಗ್ರಾಹಕರಿಲ್ಲದೇ ಯಾವುದೇ ಸಂಸ್ಥೆಯ ಉತ್ಪನ್ನಗಳು ಮತ್ತು ಸೇವೆಗಳು ಮಾರಾಟವಾಗುವುದಿಲ್ಲಾ, ತದನಂತರ ಆ ಸಂಸ್ಥೆ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಅರ್ಥಾಥ್ ಗ್ರಾಹಕರು ಇಲ್ಲವಾದ ಪರಿಸ್ಥಿತಿಯಲ್ಲಿ ಸಂಸ್ಥೆಗಳಿಗೆ ಉಳಿಗಾಲವಿಲ್ಲ.

**ಬದಲಾಗುತ್ತಿರುವ ಗ್ರಾಹಕ ಸೇವೆಯ ರೀತಿ–ನೀತಿ ಹಾಗೂ ಮನೋಧೋರಣೆ :** ಭಾರತಕ್ಕೆ ಸ್ವಾತಂತ್ರ ಒದಗಿದ ನಂತರ ಗ್ರಾಹಕರ ಗ್ರಹಿಕೆ ಹಾಗೂ ಗ್ರಾಹಕರ ಮನೋಭಾವನೆಗಳು ಸಂಪೂರ್ಣ ರೀತಿಯಲ್ಲಿ ಬದಲಾಗುತ್ತಾ ಬಂದಿದೆ.

(a) 1950–60ರ ದಶಕದಲ್ಲಿ ಸಂಸ್ಥೆಗಳು ಗ್ರಾಹಕರಿಗೆ ಸೇವೆ ನೀಡುತ್ತಿದ್ದವು.

(b) 1960–80ರ ದಶಕದಲ್ಲಿ ಸಂಸ್ಥೆಗಳು ಗ್ರಾಹಕರನ್ನು ಸಂತೃಪ್ತಿಗೊಳಿಸುವಲ್ಲಿ ಬಹಳಷ್ಟು ಮಾರ್ಪಾಡು ಮಾಡಿಕೊಳ್ಳಬೇಕಾಯಿತು.

(c) 1980–90ರ ದಶಕದಲ್ಲಿ ಸಂಸ್ಥೆಗಳು ಗ್ರಾಹಕರನ್ನು ಸಂತೋಷಗೊಳಿಸುವಲ್ಲಿ ಹೊಸ ವಿಧಾನಗಳನ್ನು ತರುವಲ್ಲಿ ಪ್ರಯತ್ನ ಪಡೆಯಬೇಕಾಯಿತು.

(d) 1990–2000ರ ದಶಕದಲ್ಲಿ ಸಂಸ್ಥೆಗಳು ಗ್ರಾಹರನ್ನು ಅತ್ಯಾನಂದಗೊಳಿಸುವಲ್ಲಿ ವಿನೂತನವಾದ ಸೇವೆ ನೀಡುವತ್ತ ದೃಷ್ಟಿಹರಿಸಬೇಕಾಯಿತು. (Delighting the Customers)

(e) 2000 – ದಶಕಗಳಲ್ಲಿ ಸಂಸ್ಥೆಗಳು ಇರುವ ಗ್ರಾಹಕರನ್ನು ಬೇರೆ ಸಂಸ್ಥೆಗಳಿಗೆ ಹೋಗದಂತೆ ತಡೆಗಟ್ಟುವ ಮಹಾಪ್ರಯತ್ನ ಮಾಡುವಲ್ಲಿ ತಮ್ಮ ವೇಳೆ, ಹಣ ಹಾಗೂ ಬುದ್ಧಿವಂತಿಕೆ ಉಪಯೋಗಿಸುವಲ್ಲಿ ನಿರತರಾಗುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

**ಸಂಸ್ಥೆಗಳಲ್ಲಿ ಗ್ರಾಹಕರ ಪ್ರಯಾಣ :** ಯಾವುದೇ ಸಂಸ್ಥೆಯ ಉತ್ಪನ್ನ ಮತ್ತು ಸೇವೆಗಳನ್ನು ಉಪಯೋಗಿಸುವಾಗ, ಗ್ರಾಹಕರು ಒಂದು ರೀತಿ ಸಂಶಯದಿಂದ ಸಂಸ್ಥೆಗೆ ಬರುತ್ತಾರೆ.ನಂತರ ಅವರ ಆಸೆ – ಅಪೇಕ್ಷೆಗಳು ನೇರವೇರಬಹುದು ಎಂಬ ವಿಶ್ವಾಸ ಬಂದಾಗ ಪ್ರತೀಕ್ಷೆ ಆಗಿ ಮಾರ್ಪಾಡುಗೊಳ್ಳುತ್ತಾರೆ. ಈ ಹಂತದಲ್ಲಿ ಅವರಿಗೆ ತಮಗೆ ಸೇವೆ ದೊರಕುವ ನಂಬಿಕೆ ಬಂದರೆ ಗ್ರಾಹಕರಾಗಿ ಸಂಸ್ಥೆಯ ಜೊತೆ ಸಂಬಂಧ ಪ್ರಾರಂಭವಾಗುತ್ತದೆ. ಅವರಿಗೆ ಬೇಡವಾದ ಸೇವೆಗಳು ಲಭ್ಯವಾದರೆ ಮತ್ತು ಗ್ರಾಹಕ ಸಂತೃಪ್ತಿ ಕಡೆ ಸಂಸ್ಥೆಗಳು ಗಮನ ಹರಿಸಿದಾಗ ಸಂಬಂಧ ಬೆಳವಣಿಗೆ (Nourishing /nurturing relation ship) ಇದೇ ರೀತಿ ನಿರಂತರವಾಗಿ ಅವರ ಎಲ್ಲ ಅವಶ್ಯಕತೆ–ಅನುಕೂಲತೆಗಳಿಗೆ ಸಂಪೂರ್ಣ ಸಹಾಯ – ಬೆಂಬಲ– ಪ್ರತಿಸ್ಪಂದನೆ ದೊರೆತಾಗ ಈ ಗ್ರಾಹಕರು ಸಂಸ್ಥೆಗಳ ಪ್ರಚಾರಕ ಮತ್ತು ರಾಯಭಾರಿ (Advertiser and brand ambassador) ಗಳಾಗಿ ಸಂಸ್ಥೆಗಳ ಬೆಳವಣಿಗೆ ಹರಿಕಾರರರಾಗುತ್ತಾರೆ.

ಆಕಸ್ಮಾತ್ ಈ ಮೇಲೆ ವಿವರಿಸಿದ ಯಾವುದೇ ಹಂತದಲ್ಲಿ ಅಸಂತೃಪ್ತಿ ಬಂದಾಗ ಅಥವಾ ಅವರಿಗೆ ಸಿಬ್ಬಂಧಿಗಳ ಪ್ರತಿಸ್ಪಂದನೆ ನೀಡದೇ ಇದ್ದಾಗ ಅಥವಾ ಅವರ ತೊಂದರೆಗಳಿಗೆ ಪರಿಹಾರ ದೊರಕದೆ ಇದ್ದಾಗ, ಗ್ರಾಹಕರು ಸಹಜವಾಗಿ ಸಂಸ್ಥೆಯನ್ನು ಬಿಟ್ಟು ಬೇರೆ ಸಂಸ್ಥೆಗಳನ್ನು ಹುಡುಕಿ ಹೊರಗೆ ಹೋಗುವ ಸಾಧ್ಯತೆಗಳು ಹೆಚ್ಚಾಗಿ ಒಂದು ದಿನ ಬೇರೆ ಸಂಸ್ಥೆಗಳಿಗೆ ತಮ್ಮನ್ನು ವರ್ಗಾಯಿಸಿಕೊಂಡು ಬಿಡುತ್ತಾರೆ.

**ಗ್ರಾಹಕ ಸಂಬಂಧ ನಿರ್ವಹಣೆಯಲ್ಲಿ ಹಂತಗಳು :** ಒಟ್ಟಿನಲ್ಲಿ ಸಿಆರ್ಎಂ 8 ಹಂತಗಳಿವೆ. ಅವರುಗಳ ಬಗ್ಗೆ ಸಂತೃಪ್ತಿಯ ಬಗ್ಗೆ ಈ ಕೆಳಗೆ ವಿವರಣೆ ನೀಡಲಾಗಿದೆ.

ಗ್ರಾಹಕ (costomer) Instution + purpose ಒಂದು ಸಂಸ್ಥೆ ಮತ್ತು ಇದರ ಉದ್ದೇಶಗಳು ಒಂದುಗೂಡಿದಾಗ "ಗ್ರಾಹಕರ ಹುಟ್ಟು ಕಾಣಿಸುತ್ತದೆ. ಗ್ರಾಹಕರ ಸೇವೆ (Customer Service) need Indetification) ಪ್ರತಿಯೊಬ್ಬ ಗ್ರಾಹಕರಿಗೂ ವಿವಿಧ ರೀತಿಯ ಅವಶ್ಯಕತೆಗಳು ಇರುತ್ತವೆ. ಈ ಅವಶ್ಯಕತೆಗಳನ್ನು ಹುಡುಕಿ ಅವುಗಳನ್ನು ಸಂಸ್ಥೆಗಳು ಪೂರೈಸಿದರೆ ಅದಕ್ಕೆ "ಗ್ರಾಹಕ ಸಂತೃಪ್ತಿ (Costomer satisfacition +Customer = Service) ಗ್ರಾಹಕರಿಗೆ ಸಂಸ್ಥೆಗಳು ವಿವಿಧ ರೀತಿಯ ಸೇವೆಗಳನ್ನು ನೀಡುತ್ತಾ ಹೋದಂತೆ, ಗ್ರಾಹಕನ ಅವಶ್ಯಕತೆಗಳು ಪೂರೈಸುತ್ತ ಹೋಗುತ್ತದೆ. ಕಾಲಕ್ರಮೇಣ "ಗ್ರಾಹಕ ಸಂತೃತ್ತಿ" ಕಂಡು ಬರುತ್ತದೆ. ಗ್ರಾಹಕರಲ್ಲಿ ಆತ್ಮೀಯತೆ (Customer Intimacy Customer Satisficatiom = Employee Involvement) ಗ್ರಾಹಕರು ಸಂಸ್ಥೆಗಳಿಂದ ವಿವಿಧ ಸೇವೆಗಳನ್ನು ಅನುಕೂಲತೆಗಳನ್ನು ಪಡೆಯುತ್ತಾ ಹೋದಂತೆ, ಸಂತೃಪ್ತಗೊಳ್ಳುತ್ತಾ ಸಾಗಿದಂತೆ, ಗ್ರಾಹಕರಲ್ಲಿ ಆ ಸಂಸ್ಥೆಯ ಸಿಬ್ಬಂದಿಯವರು ನಿಕಟ ಸಂಪರ್ಕವಾಗಿ ಕಾಲಕ್ರಮೇಣ ಸಿಬ್ಬಂದಿಗಳು ಗ್ರಾಹಕರ ಜೊತೆ ಆತ್ಮೀಯತೆಯಿಂದ ವ್ಯವಹಾರ ಮಾಡಲು ತೊಡಗುತ್ತಾರೆ. ಈ ಸಂಬಂಧ ಆತ್ಮೀಯತೆ ಹೆಚ್ಚಾಗಿದ್ದನ್ನು ಕಾಣಬಹುದು.

ಮುಂದಿನ ಸಂಚಿಕೆಗೆ...

# RBI NEWS - April 2015

## Reserve Bank of India Governor Dr.Raghuram Rajan has announced the first Bi-Monthly Monetary Policy statement, 2015-16 on 7th April 2015.



**K.Vittal Shetty,** B.A, DJPR, CAIIB, DBM (IIB) & MBM,
(Former Chief General Manager & CEO of SUCO BANK)

**The policy rates remain unchanged**

| | |
|---|---|
| BANK RATE | 8.50% |
| REPO RATE | 7.50% |
| REVERSE REPO RATE | 6.50% |
| MARGINAL STANDING FACILITY RATE | 8.50% |

**Reserve Ratios**

| | |
|---|---|
| Cash Reserve Ratio | 4% |
| Statutory Reserve Ratio | 21.5% |

**RBI Governor also announced the following pertaining to Co-operative Banks :**

- With a view to enlarging the scope of urban co-operative banks for expanding their business, it has been decided to allow financially sound and well managed scheduled urban co-operative banks, which are CBS-enabled and having minimum net worth of `100 crore, to issue credit cards.
- Similarly, with a view to providing greater freedom to state co-operative banks to expand their business and to provide technology-enabled services to their customers, it has been decided to permit state co-operative banks satisfying certain eligibility criteria to set up off-site ATMs/mobile ATMs without obtaining prior approval from the Reserve Bank. Detailed guidelines in this regard will be issued separately.

**Scheduled Commercial Banks Business in India**

(Rupees in Billions)

| Item | Outstanding as on April 3,2015 |
|---|---|
| 1. Aggregate Deposits | 89114.9 |
| Demand | 9523.4 |
| Time | 79591.5 |
| 2. Investments | 25501.8 |
| 3. AdvancesBank Credit | 69309.6 |

Priority Sector lending-Targets and classifications stands revised with effect from 23 April, 2015.

**The salient features of the guidelines are as under :**

(i) **Categories of the priority sector :** Medium Enterprises, Social Infrastructure and Renewable Energy will form part of priority sector, in addition to the existing categories.

(ii) **Agriculture :** The distinction between direct and indirect agriculture is dispensed with.

(iii) **Small and Marginal Farmers :** A target of 8 percent has been prescribed for Small and Marginal Farmers within agriculture, to be achieved in a phased manner i.e., 7 percent by March 2016 and 8 percent by March 2017.

(iv) **Micro Enterprises :** A target of 7.5 percent has been prescribed for Micro Enterprises, to be achieved in a phased manner i.e. 7 percent by March 2016 and 7.5 percent by March 2017.

(v) There is no change in the target of 10 percent for Weaker Sections.

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 20

(vi) **Target for Foreign Banks :** Foreign Banks with 20 branches and above already have priority sector targets and sub-targets for Agriculture and Weaker Sections, which are to be achieved by March 31, 2018 as per the action plans submitted by them and approved by RBI. The sub-targets for Small and Marginal Farmers and Micro Enterprises would be made applicable post 2018 after a review in 2017. Foreign banks with less than 20 branches will move to Total Priority Sector Target of 40 percent of ANBC or Credit Equivalent Amount of Off-Balance Sheet Exposure, whichever is higher, on par with other banks by 2019-20, and the sub-targets for these banks, if to be made applicable post 2020, would be decided in due course.

(vii) Bank loans to food and agro processing units will form part of Agriculture.

(viii) **Export credit :** Export credit upto 32 percent of ANBC or Credit Equivalent Amount of Off-Balance Sheet Exposure, whichever is higher, will be eligible as part of priority sector for foreign banks with less than 20 branches. For other banks, the incremental export credit over corresponding date of the preceding year will be reckoned upto 2 percent of ANBC or Credit Equivalent Amount of Off-Balance Sheet Exposure, whichever is higher.

(ix) The loan limits for housing loans and MFI loans qualifying under priority sector have been revised.

(x) The priority sector non-achievement will be assessed on quarterly average basis at the end of the respective year from 2016-17 onwards, instead of annual basis as at present.

**kohimavittal@hotmail.com**
**Mobile : 9845699904**

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.

web : www.souharda.coop, E-mail : souharda@souharda.coop,

**ದೂ.ಸಂ :** 23378375/76/77/78/79/80 & 23474408, 23573291

ಸಂಪಾದಕ, ಪ್ರಕಾಶಕ : **ಶರಣಗೌಡ ಜಿ.ಪಾಟೀಲ,** ಸಂಚಿಕೆ
ಸಂಚಿಕೆ ಸಿದ್ಧತೆ : **ವಿ.ಜೆ. ಕಾರಕೂನ**
ವಿನ್ಯಾಸ : **ವರ್ಣ ಕಮ್ಯುನಿಕೇಷನ್ಸ್**
ಮುದ್ರಣ : ಶಕ್ತಿ ಪ್ರಿಂಟೆಕ್, ಬೆಂಗಳೂರು.

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| **ಹೆಸರು** | **ಪದನಾಮ** | **ದೂರವಾಣಿ** |
|---|---|---|
| ಶ್ರೀ ಗುರುನಾಥ ಜಾಂತಿಕರ | ಅಧ್ಯಕ್ಷರು | 8884466701 |
| ಶ್ರೀ ಹೆಚ್ ವಿ. ರಾಜೀವ್ | ಉಪಾಧ್ಯಕ್ಷರು | 8884466702 |
| ಶ್ರೀ ಶರಣಗೌಡ ಜಿ. ಪಾಟೀಲ | ವ್ಯವಸ್ಥಾಪಕ ನಿರ್ದೇಶಕರು | 8884466703 |
| ಶ್ರೀ ನಾರಾಯಣ ಹೆಗಡೆ | ಉಪಪ್ರಧಾನ ವ್ಯವಸ್ಥಾಪಕರು | 8884466704 |
| ಶ್ರೀ ವೈ ಕುಮಾರ್ | ಉಪ ಪ್ರಧಾನ ವ್ಯವಸ್ಥಾಪಕರು | 8884466705 |
| ಶ್ರೀ ಶ್ರೀಕಾಂತ್ ಬರುವೆ | ಸಹ ಪ್ರಧಾನ ವ್ಯವಸ್ಥಾಪಕರು | 8884466706 |
| ಶ್ರೀ ರಘುನಂದನ್ ಕೆ. | ಸಹ ಪ್ರಧಾನ ವ್ಯವಸ್ಥಾಪಕರು | 8884466707 |
| ಶ್ರೀಮತಿ ಕೃತಿ ಜನಾರ್ಧನ್ | ಬೆಂಗಳೂರು ವಿಭಾಗಾಧಿಕಾರಿ | 8884466708 |
| ಶ್ರೀಮತಿ ಶೋಭಾ ಆರ್. | ಸಹ ಪ್ರಧಾನ ವ್ಯವಸ್ಥಾಪಕರು | 8884466709 |
| ಶ್ರೀ ವಿ.ಜೆ. ಕಾರಕೂನ | ತರಬೇತಿ ಅಧಿಕಾರಿ | 8884466710 |
| ಶ್ರೀ ಜಿ.ಎಸ್. ಟೋಪ್ಪಣ್ಣವರ್ | ಬೆಳಗಾವಿ ವಿಭಾಗಾಧಿಕಾರಿ | 8884466711 |
| ಶ್ರೀ ಶಿವಕುಮಾರ ಬಿರಾದಾರ | ಮೈಸೂರು ವಿಭಾಗಾಧಿಕಾರಿ | 8884466712 |
| ಶ್ರೀ ಸಂಜಯ್ ಕೊರಟ್‌ಕರ್ | ಕಲಬುರಗಿ ವಿಭಾಗಾಧಿಕಾರಿ | 8884466714 |

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, ಐಕೆಬ್ಲಾಕ್, 1ನೇ ಮೈನ್ 1ನೇ ಕ್ರಾಸ್, ಡಾ॥ ರಾಜ್‌ಕುಮಾರ ರಸ್ತೆ, ರಾಜಾಜಿನಗರ, ಬೆಂಗಳೂರು.
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ ವಿಳಾಸ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ,
ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010